# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 09.11.2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಎನ್. ಶಾಂತಕುಮಾರಿ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3 | ಮೋಹನ್ ಕುಮಾರ್ | ಸದಸ್ಯರು | ಉಪ ಕಾನೂನು ಅಧಿಕಾರಿಗಳು |
| 4 | ರವೀಂದ್ರನ್ ಕೆ | ಸದಸ್ಯರು | ವಿಶೇಷ ಅಧಿಕಾರಿ |
| 5 | ಜೆ. ಭುವನೇಶ್ವರಿ | ಸದಸ್ಯರು | ವಿಶೇಷ ಅಧಿಕಾರಿ (ವೃಂದಾ ಮತ್ತು ನೇಮಕಾತಿ ನಿಯಮಾವಳಿ) |
| 6 | ಎಲ್.ನಾಗರತ್ನ | ಸದಸ್ಯರು | |
| 7 | ರಾಜಣ್ಣ | ಸದಸ್ಯರು | |
| 8 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | |
| 9 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/06/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಸರ್ಕಾರದ ಆದೇಶದಂತೆ, 07 ನಗರ ಸಭೆಗಳು, 01 ಪುರಸಭೆ ಮತ್ತು 110 ಹಳ್ಳಿಗಳು ಸೇರ್ಪಡೆಗೊಂಡು ದಿನಾಂಕ:16-01-2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾಗಿರುತ್ತದೆ. ಹಳೆ ಬೆಂಗಳೂರು ಮಹಾನಗರ ಪಾಲಿಕೆಯ 03 ವಲಯಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 05 ಹೊಸ ವಲಯಗಳು ಸೇರಿ ಒಟ್ಟು 08 ವಲಯಗಳು ಅಸ್ತಿತ್ವದಲ್ಲಿದ್ದು, ಇದರಂತೆ ಹಳೆಯ ಮೂರು ವಲಯಗಳಲ್ಲಿರುವ 100 ವಾರ್ಡ್‌ಗಳ ಜೊತೆಗೆ 98 ವಾರ್ಡ್‌ಗಳನ್ನು ಹೊಸದಾಗಿ ಸೇರಿಸಿ ಒಟ್ಟು 198 ವಾರ್ಡ್‌ಗಳನ್ನು ಸೃಜಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ ಕಂದಾಯ ಅಧಿಕಾರಿ ಹುದ್ದೆಗೆ ಮೌಲ್ಯಮಾಪಕರು/ವ್ಯವಸ್ಥಾಪಕರು/ಶೀಘ್ರಲಿಪಿಗಾರರ ವೃಂದದಿಂದ 5:5:1ರಂತೆ ಮುಂಬಡ್ತಿಯನ್ನು ನೀಡಲಾಗುತ್ತಿದ್ದು, ಪ್ರಸ್ತುತ ಹಳೆಯ ಬಿ.ಎಂ.ಪಿಗೆ 74 ಮೌಲ್ಯಮಾಪಕರ ಮಂಜೂರಾತಿ ಹುದ್ದೆಗಳಿದ್ದು, ಸರ್ಕಾರವು ಬಿ.ಬಿ.ಎಂ.ಪಿ ಗೆ ಯಾವುದೇ ಮೌಲ್ಯಮಾಪಕರ ಹುದ್ದೆಗಳನ್ನು ಮಂಜೂರಾತಿ ನೀಡಿರುವುದಿಲ್ಲ. ಹಳೆ ಬೆಂಗಳೂರು ಮಹಾನಗರ ಪಾಲಿಕೆಗೆ 78 ವ್ಯವಸ್ಥಾಪಕರ ಮಂಜೂರಾತಿ ಹುದ್ದೆಗಳಿದ್ದು, ಸರ್ಕಾರವು ದಿನಾಂಕ: 09/03/2007ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 50 ವ್ಯವಸ್ಥಾಪಕರ ಹುದ್ದೆಗಳನ್ನು ಮಂಜೂರಾತಿ ನೀಡಿರುತ್ತದೆ. ಇದರಂತೆ ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 78+50=128 ವ್ಯವಸ್ಥಾಪಕರ ಮಂಜೂರಾತಿ ಹುದ್ದೆಗಳು

ಇರುತ್ತವೆ. ಸಹಾಯಕ ಕಂದಾಯ ಅಧಿಕಾರಿ ಹುದ್ದೆಗೆ ಮೌಲ್ಯಮಾಪಕರು ಮತ್ತು ವ್ಯವಸ್ಥಾಪಕರು ವೃಂದಗಳಿಂದ ಸಮನಾಂತರವಾಗಿ 5:5:1ರಂತೆ ಮುಂಬಡ್ತಿ ನೀಡಲು ಮೌಲ್ಯಮಾಪಕರ ಹುದ್ದೆಗಳ ಕೊರತೆ ಇರುತ್ತದೆ.

| ಕ್ರ.ಸಂ | ಹುದ್ದೆ | ವೇತನ ಶ್ರೇಣಿ | ಒಂದು ತಿಂಗಳ ಒಟ್ಟು ವೇತನ |
|---|---|---|---|
| 1 | ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು | 7,275–13,350<br>ವೇತನ ರೂ.10,487 X 40 | 40 ಮಂದಿ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಒಂದು ತಿಂಗಳ ವೇತನ ರೂ.4,19,480–00. |
| 2 | ಮೌಲ್ಯಮಾಪಕರು | 10,000–18,150<br>ವೇತನ ರೂ.14,500X 40 | 40 ಮಂದಿ ಮೌಲ್ಯಮಾಪಕರ ಒಂದು ತಿಂಗಳ ವೇತನ ರೂ.5,80,000–00. |
| ಒಂದು ತಿಂಗಳ ವೇತನದ ವ್ಯತ್ಯಾಸದ ಮೊತ್ತ | | | ರೂ. 1,60,520.00 |

40 ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಯ ವೇತನ ಶ್ರೇಣಿ ಮತ್ತು 40 ಮೌಲ್ಯಮಾಪಕರ ಹುದ್ದೆಯ ವೇತನ ಶ್ರೇಣಿಯಂತೆ ಒಂದು ತಿಂಗಳ ವೇತನದ ವ್ಯತ್ಯಾಸದ ಮೊತ್ತ ರೂ.1,60,520.00 ಮಾತ್ರ ಆಗಿರುತ್ತದೆ. ಪ್ರಸ್ತುತ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಮೌಲ್ಯಮಾಪಕರ ಹುದ್ದೆಗೆ ಮುಂಬಡ್ತಿಯನ್ನು ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು, ಪ್ರಥಮ ದರ್ಜೆ ಗುಮಾಸ್ತರು ಮತ್ತು ಶೀಘ್ರಲಿಪಿಗಾರರ ವೃಂದದಿಂದ 7:5:1ರ ಅನುಪಾತದಲ್ಲಿ ಪರಿಗಣಿಸಲಾಗುತ್ತಿದೆ. ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು ಮತ್ತು ಶೀಘ್ರಲಿಪಿಗಾರರಿಗೆ ಮುಂದಿನ ಮುಂಬಡ್ತಿ ಹುದ್ದೆ ಮೌಲ್ಯಮಾಪಕರ ಹುದ್ದೆಯಾಗಿರುತ್ತದೆ. ಪ್ರಥಮ ದರ್ಜೆ ಗುಮಾಸ್ತರ ವೃಂದದಿಂದ ಮೌಲ್ಯಮಾಪಕರ ಹುದ್ದೆಗೆ ಅಥವಾ ವ್ಯವಸ್ಥಾಪಕರ ಹುದ್ದೆಗೆ ಮುಂಬಡ್ತಿ ಹೊಂದಲು ಅವಕಾಶವಿರುತ್ತದೆ. ಇದರಂತೆ ಪ್ರಥಮ ದರ್ಜೆ ಗುಮಾಸ್ತರ ವೃಂದದ ನೌಕರರು ಮೌಲ್ಯಮಾಪಕರ ಹುದ್ದೆಗೆ ಮುಂಬಡ್ತಿ ಕೋರಿ ಐಚ್ಛಿಕತ ಸಲ್ಲಿಸಿರುವಂತಹ ನೌಕರರುಗಳಿಗೆ ಮೌಲ್ಯಮಾಪರಕ ಹುದ್ದೆಗೆ ಮುಂಬಡ್ತಿ ಪರಿಗಣಿಸಲು ಮೌಲ್ಯಮಾಪಕರ ಹುದ್ದೆಗಳು ಕೊರತೆ ಇರುತ್ತದೆ. ಆದರೆ ಬಿ.ಬಿ.ಎಂ.ಪಿ. ಗೆ ಸರ್ಕಾರವು ದಿನಾಂಕ:09-03-2007 ರಂದು ಮಂಜೂರಾತಿ ನೀಡಿರುವ 50 ವ್ಯವಸ್ಥಾಪಕರ ಹುದ್ದೆಗಳಿಗೆ ಪ್ರಥಮ ದರ್ಜೆ ಗುಮಾಸ್ತರ ವೃಂದದಿಂದ ಈಗಾಗಲೇ ನೀಡಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರವು ಮಂಜೂರಾತಿ ನೀಡಿರುವ 137 ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು ಹುದ್ದೆಗಳಲ್ಲಿ 40 ಹುದ್ದೆಗಳನ್ನು ಮೌಲ್ಯಮಾಪಕರ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಬೇಕೆಂದು ಈ ಹಿಂದೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಈ ಸಂಬಂಧ ಸರ್ಕಾರವು ಪತ್ರ ಸಂಖ್ಯೆ: ನಅಇ 141 ಎಂಎಲ್‌ಆರ್ 2006, ದಿನಾಂಕ:06/12/2008ರ ಪತ್ರದಲ್ಲಿ ಸರ್ಕಾರದ ಪತ್ರ ಸಂಖ್ಯೆ: ನಅಇ 139 ಎಂಎನ್‌ವೈ 2005, ದಿನಾಂಕ:29/05/2008 ಮತ್ತು 21/06/2008ರ ಪತ್ರಗಳಲ್ಲಿ ತಿಳಿಸಿರುವಂತೆ, ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಮತ್ತು ಒಂದು ವೇಳೆ ಹುದ್ದೆಗಳನ್ನು ಸೃಜಿಸಬೇಕಾದಲ್ಲಿ ಸೂಕ್ತ

ಸಕಾರಣಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಈ ಮೇರೆಗೆ, ಸರ್ಕಾರವು ಸಂಖ್ಯೆ: ಯುಡಿಡಿ 141 ಎಂಎಲ್ಆರ್ 2006, ದಿನಾಂಕ:09/03/2007ರ ಆದೇಶದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಂಜೂರಾತಿ ನೀಡಿರುವ 137 ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳಲ್ಲಿ 40 ಹುದ್ದೆಗಳನ್ನು ಮೌಲ್ಯಮಾಪಕರ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಲು ಕೋರಿ ಸರ್ಕಾರಕ್ಕೆ ದಿನಾಂಕ:16/01/2009ರಂದು ವಿವರಣೆಗಳುಳ್ಳ ಪತ್ರವನ್ನು ಬರೆಯಲಾಗಿರುತ್ತದೆ. ಆದರೆ, ಸರ್ಕಾರದಿಂದ ಯಾವುದೇ ಉತ್ತರ ಬಂದಿರುವುದಿಲ್ಲ.

ಪ್ರಸ್ತುತ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ವೃಂದದಿಂದ ಸೇವಾ ಹಿರಿತನದ ಮೇಲೆ ಮೌಲ್ಯಮಾಪಕರ ಮುಂಬಡ್ತಿ ಹುದ್ದೆಗೆ ಅರ್ಹರಾಗಿರುವ ಹೆಚ್ಚಿನ ನೌಕರರು ಸ್ಥಗಿತ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ವೃಂದದಿಂದ ಮೌಲ್ಯಮಾಪಕರ ಹುದ್ದೆಗೆ ಮುಂಬಡ್ತಿ ನೀಡಿದಲ್ಲಿ ಪಾಲಿಕೆಗೆ ಹೆಚ್ಚಿನ ಆರ್ಥಿಕ ಹೊರೆ ಆಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದಂತೆ, 07 ನಗರ ಸಭೆಗಳು, 01 ಪುರಸಭೆ ಮತ್ತು 110 ಹಳ್ಳಿಗಳು ಸೇರ್ಪಡೆಗೊಂಡು ದಿನಾಂಕ: 16/01/2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಗೊಂಡಿದ್ದು, 05 ಹೊಸ ವಲಯಗಳು ಮತ್ತು ಹಳೆಯ 03 ವಲಯಗಳು ಸೇರಿ 08 ವಲಯಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಸ್ತಿತ್ವದಲ್ಲಿದ್ದು, ಹಾಗೂ ಹಳೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ 100 ವಾರ್ಡ್‌ಗಳ ಜೊತೆಗೆ 98 ವಾರ್ಡ್‌ಗಳನ್ನು ಸೇರಿಸಿ ಒಟ್ಟು 198 ವಾರ್ಡ್‌ಗಳನ್ನು ಸೃಜಿಸಲಾಗಿರುತ್ತದೆ. ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 08 ವಲಯಗಳ ಕಂದಾಯ ಇಲಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸಹಾಯಕ ಕಂದಾಯ ಅಧಿಕಾರಿ ಹುದ್ದೆಗಳಿಗೆ ಮುಂಬಡ್ತಿಯನ್ನು ಮೌಲ್ಯಮಾಪಕರ ವೃಂದದಿಂದ ಮತ್ತು ವ್ಯವಸ್ಥಾಪಕರ ವೃಂದದಿಂದ ಅರ್ಹ ನೌಕರರುಗಳಿಗೆ ಸಮವಾಗಿ ಮುಂಬಡ್ತಿ ಪರಿಗಣಿಸಲು ಮೌಲ್ಯಮಾಪಕರ ವೃಂದದಿಂದ 54 ಮೌಲ್ಯಮಾಪಕರ ಹುದ್ದೆಗಳು ಕೊರತೆಯಿರುತ್ತದೆ. ಆದ್ದರಿಂದ, ಸರ್ಕಾರವು ಸಂಖ್ಯೆ:ಯುಡಿಡಿ 141 ಎಂಎಲ್ಆರ್ 2006, ದಿನಾಂಕ:09/03/2007ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಗೆ ಮಂಜೂರಾತಿ ನೀಡಿರುವ 137 ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳಲ್ಲಿ 40 ಹುದ್ದೆಗಳನ್ನು ಮೌಲ್ಯಮಾಪಕರ ಹುದ್ದೆಗಳಿನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಲು ಸರ್ಕಾರವನ್ನು ಕೋರುವ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 14/06/2012ರ ಸಂಖ್ಯೆ: ಬಿ12(1)ಪಿಆರ್/361/2008–09 ರ ಟಿಪ್ಪಣಿ.

**ನಿರ್ಣಯ:**

ಮಾನ್ಯ ಆಯುಕ್ತರ ಟಿಪ್ಪಣಿ ದಿನಾಂಕ:14.06.2012 ಅನ್ನು ಒಪ್ಪಲಾಯಿತು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 09.11.2012 ರಂದು ಪೂಜ್ಯ ಮಹಾಪೌರರ ಉಪಸ್ಥಿತಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಜಂಟಿ ಸಭೆಯ ನಡವಳಿಗಳು

| ಕ್ರ. ಸ. | ಅಧ್ಯಕ್ಷರು/ ಸದಸ್ಯರು | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|---|
| | | ಸಿ ಮತ್ತು ಆ.ಸು ಸ್ಥಾಯಿ ಸಮಿತಿ | ತೆ ಮತ್ತು ಆ ಸ್ಥಾಯಿ ಸಮಿತಿ. | |
| 1 | ಅಧ್ಯಕ್ಷರು | ವಿ.ವಾಗೀಶ್ | ಮುನೀಂದ್ರಕುಮಾರ್.ಕೆ.ಎ | ಉಪ ಆಯುಕ್ತರು(ಆಡಳಿತ) |
| 2 | ಸದಸ್ಯರು | ಎನ್. ಶಾಂತಕುಮಾರಿ | ಮುನಿಸ್ವಾಮಿಗೌಡ | ಕೌನ್ಸಿಲ್ ಕಾರ್ಯದರ್ಶಿಗಳು |
| 3 | ಸದಸ್ಯರು | ಮೋಹನ್ ಕುಮಾರ್ | ಆನಂದ್. ವಿ | ಕಾನೂನು ಕೋಶದ ಮುಖ್ಯಸ್ಥರು |
| 4 | ಸದಸ್ಯರು | ರವೀಂದ್ರನ್.ಕೆ | ಕೆ. ಉಮೇಶ್‌ಶೆಟ್ಟಿ | ಮುಖ್ಯ ಲೆಕ್ಕಾಧಿಕಾರಿಗಳು |
| 5 | ಸದಸ್ಯರು | ಜೆ. ಭುವನೇಶ್ವರಿ | ನೂರ್ ಜಹಾನ್ | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 6 | ಸದಸ್ಯರು | ಎಲ್.ನಾಗರತ್ನ | ಟಿ.ಎ. ಗಾಯಿತ್ರಿ | ಉಪ ನಿಯಂತ್ರಕರು (ಹಣಕಾಸು) |
| 7 | ಸದಸ್ಯರು | ರಾಜಣ್ಣ | ಸುರೇಶ್. ಹೆಚ್ | ಉಪ ಕಾನೂನು ಅಧಿಕಾರಿಗಳು |
| 8 | ಸದಸ್ಯರು | ಎಸ್.ಎಂ. ಮುರುಗೇಶ್ ಮೊದಲಿಯಾರ್ | | ವಿಶೇಷ ಅಧಿಕಾರಿಗಳು |
| 9 | ಸದಸ್ಯರು | ಅಬ್ದುಲ್ ರಖೀಬ್ ಝಕೀರ್ | | ವಿಶೇಷ ಅಧಿಕಾರಿಗಳು (ವೃಂದಾ ಮತ್ತು ನೇಮಕಾತಿ ನಿಯಮಾವಳಿ) |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/11/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿನಾಂಕ:17.01.2007ರಂದು ಸರ್ಕಾರದ ಅಧಿಸೂಚನ ಸಂಖ್ಯೆ:ನಅಇ/141/ಎಂಎಲ್‌ಆರ್/2006ರಂತೆ ಅಸ್ಥಿತ್ವಕ್ಕೆ ಬಂದಿರುತ್ತದೆ. ಇದಕ್ಕಿಂತ ಮುಂಚೆ ಬೆಂಗಳೂರು ಮಹಾನಗರ ಪಾಲಿಕೆಯ ವಿಸ್ತೀರ್ಣ 226 ಚ.ಕಿ.ಮೀ ಗಳಾಗಿದ್ದು, ಸುಮಾರು 45 ಲಕ್ಷ ಜನಸಂಖ್ಯೆ ಹೊಂದಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 800 ಚ.ಕಿ.ಮೀ. ವಿಸ್ತರಣಗೊಂಡಿದ್ದು, ಜನಸಂಖ್ಯೆಯು ಸುಮಾರು 80 ಲಕ್ಷ ಇರಬಹುದಾಗಿ ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆಯ ಕಾರ್ಯಕ್ಷೇತ್ರ ವಿಸ್ತರಣಗೊಂಡಿದ್ದು, ಇದಕ್ಕೆ ಅನುಗುಣವಾಗಿ ಅಗತ್ಯ ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸಬೇಕಾದ ಕಾರಣ ಸಾಮಾನ್ಯ ಆಡಳಿತ,

ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಕಂದಾಯ, ಕಾಮಗಾರಿ, ಆರೋಗ್ಯ, ತೋಟಗಾರಿಕೆ, ನಗರ ಯೋಜನೆ, ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಅರಣ್ಯ ಮತ್ತು ಇತರೆ ಇಲಾಖೆಗಳಲ್ಲಿ ಕೆಲಸದ ಒತ್ತಡ/ಪ್ರಮಾಣ ಹೆಚ್ಚಾಗಿದ್ದು, ಅಗತ್ಯ ಮೂಲಭೂತ ಸೌಕರ್ಯಗಳನ್ನು ಬೆಂಗಳೂರಿನ ಜನತೆಗೆ ಕಲ್ಪಿಸಲು ಮೇಲ್ಕಂಡ ಎಲ್ಲಾ ಪಾಲಿಕೆಯ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಬೇಕಾದ ಅನಿವಾರ್ಯತೆ ಇರುತ್ತದೆ. ಗುಣಮಟ್ಟದ ಮಾನವ ಸಂಪನ್ಮೂಲವಿಲ್ಲದೆ ಅಂತರ್ ರಾಷ್ಟ್ರೀಯ ಗುಣಮಟ್ಟದಲ್ಲಿ ಸೇವೆಗಳನ್ನು ಒದಗಿಸುವುದು/ಪೂರೈಸುವುದು ಕಷ್ಟ ಸಾಧ್ಯವಾಗುತ್ತದೆ.

ಕಳೆದ 40 ವರ್ಷಗಳಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅತಿ ಮುಖ್ಯವಾಗಿ ಆಡಳಿತ ಕ್ಷೇತ್ರದಲ್ಲಿ ನಿರೀಕ್ಷೆಗೂ ಮೀರಿದ ಬದಲಾವಣೆಗಳಾಗಿರುತ್ತದೆ, ಹೊಸ ಸವಾಲುಗಳು ಎದುರಾಗಿರುತ್ತವೆ, ಸಮಸ್ಯೆಗಳು ಉದ್ಭವವಾಗಿರುತ್ತವೆ. ಆದ್ದರಿಂದ ಜನರ ನಿರೀಕ್ಷೆಗೆ ತಕ್ಕಂತೆ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸಲು, ಸವಾಲುಗಳಿಗೆ ಸರಿಯಾದ ಉತ್ತರಗಳನ್ನು ಕೊಡುವ ಪಾರದರ್ಶಕ ಮತ್ತು ಉತ್ತರದಾಯಿತ್ವಯುಳ್ಳ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಸ್ತಿತ್ವಕ್ಕೆ ಬರುವ ಮುಂಚೆ (ಅಂದರೆ, ದಿನಾಂಕ: 17-01-2007ಕ್ಕಿಂತ ಮುಂಚೆ) ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಸಂಖ್ಯೆ:6,60,000-00 ಆಸ್ತಿಗಳಿದ್ದವು. ಬೆಂಗಳೂರು ಮಹಾನಗರ ಪಾಲಿಕೆಯ ಸುತ್ತಮುತ್ತಲಿನ 110 ಗ್ರಾಮಗಳು, 7 ನಗರ ಸಭೆ ಮತ್ತು 1 ಪುರಸಭೆ ಪ್ರದೇಶಗಳನ್ನು ಒಳಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ಒಟ್ಟು 15,00,000-00 ಆಸ್ತಿಗಳು ಇರುತ್ತವೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ 650-00ಕೋಟಿಗಳಾಗಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ.1,100ಕೋಟಿಗಳಷ್ಟು ಆಗಿರುತ್ತದೆ.

ದಿನಾಂಕ:17-01-2007ಕ್ಕಿಂತ ಮುಂಚೆ ಪಾಲಿಕೆ ವ್ಯಾಪ್ತಿಯಲ್ಲಿ 390 ಸಂಖ್ಯೆಯಷ್ಟು ಉದ್ಯಾನವನಗಳು ಇದ್ದವು, ಪ್ರಸ್ತುತ 673 ಸಂಖ್ಯೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇನ್ನೂ 262 ಜಾಗಗಳಲ್ಲಿ ಸಮಗ್ರವಾಗಿ ಉದ್ಯಾನವನಗಳ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಮೆಟ್ರೋ ಯೋಜನೆಯನ್ನು ರೂ.6395ಕೋಟಿ ವೆಚ್ಚ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ಅಂತರಾಷ್ಟ್ರೀಯ

ವಿಮಾನ ನಿಲ್ದಾಣ ಕೂಡ ಈಗಾಗಲೇ ಅಭಿವೃದ್ಧಿ ಪಡಿಸಿದ್ದು, ಕಾರ್ಯಗತಗೊಂಡಿದೆ. ಪ್ರಸ್ತುತ ಬೆಂಗಳೂರಿನಲ್ಲಿ 2084 ಸಂಖ್ಯೆಯಷ್ಟು ಐ.ಟಿ/ಬಿ.ಟಿ ಕಂಪನಿಗಳಿರುತ್ತವೆ. ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳಲ್ಲಿ ಹೊಸ ಹುದ್ದೆಗಳ ಹಾಗೂ ಕೆಲವು ಅಗತ್ಯ ಹುದ್ದೆಗಳನ್ನು ಅಧಿಕವಾಗಿ ಸೃಷ್ಠಿಯಾಗಬೇಕಾಗಿರುತ್ತದೆ.

ಶ್ರೀಮತಿ ಹರಿಣಿ ವನಜ ಕುಮಾರಿ, ನಿವೃತ್ತ ಕೆ.ಎ.ಎಸ್ ರವರನ್ನು ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರಚಿಸಲು ಪಾಲಿಕೆಯಿಂದ ನೇಮಕಮಾಡಿಕೊಳ್ಳಲಾಗಿದೆ. ಸದರಿಯವರು ವಿವಿಧ ಇಲಾಖೆಗಳ ಹುದ್ದೆಗಳ ಕಾರ್ಯವೈಖರಿ ಬಗ್ಗೆ ಅಧ್ಯಯನ ನಡೆಸಿ, ಇಲಾಖಾ ಮುಖ್ಯಸ್ಥರೊಂದಿಗೆ ಚರ್ಚಿಸಿ, ಆಡಳಿತ ಇಲಾಖಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ರವರು ನಡೆಸಿದ ಸಭೆಯ ನಡವಳಿಕೆಗಳ ಸೂಚನೆ ಅನುಸರಿಸಿ ಎಲ್ಲಾ ಹುದ್ದೆಗಳ ಕಾರ್ಯವೈಖರಿಯ ಪುನರಾವಲೋಕನೆ ಮಾಡಿ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಕರಡನ್ನು ಈ ಉದ್ದೇಶಕ್ಕಾಗಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ಪರಿಷ್ಕರಣಾ ಸಲಹಾ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಕೆಲವೊಂದು ತಿದ್ದುಪಡಿಯೊಂದಿಗೆ ಸದರಿ ಕರಡನ್ನು ಅನುಮೋದನೆಗಾಗಿ ಮುಂದಿನ ಕ್ರಮಕ್ಕಾಗಿ ನಡವಳಿಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ವರದಿಯ ಹಿನ್ನಲೆಯಲ್ಲಿ ಅವಶ್ಯವಿಲ್ಲದಿರುವ ಹುದ್ದೆಗಳನ್ನು ರದ್ದುಪಡಿಸಲು ಕೂಡ ಪ್ರಸ್ತಾಪಿಸಲಾಗಿದೆ. ಅತ್ಯಾವಶ್ಯಕವಾಗಿ ಬೇಕಾಗಿರುವ ಹುದ್ದೆಗಳನ್ನು ಸೃಜಿಸಲು/ ಹೆಚ್ಚುವರಿಗೊಳಿಸಲು ಅಥವಾ ಕಡಿಮೆ ದರ್ಜೆಗೊಳಿಸಲೂ ಸಹ ಪ್ರಸ್ತಾಪಿಸಲಾಗಿದೆ.

ಈ ಹೊಸ ಹುದ್ದೆಗಳನ್ನು ಸೃಜಿಸಿರುವುದರಿಂದ ಆಗುವ ಆರ್ಥಿಕ ಹೊರೆಯನ್ನು ಕೂಡ ಪರಿಗಣಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಕೆಲವು ಶ್ರೇಣಿಯ ಹುದ್ದೆಗಳು ಇಲ್ಲದೆ ಇದ್ದರೂ ಕೂಡ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ತೆಗೆದುಕೊಂಡು ಮಹಾನಗರ ಪಾಲಿಕೆಯ ಆಡಳಿತ ಹಿತದೃಷ್ಟಿಯಿಂದ ಕರ್ತವ್ಯ ನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಈಗ ಪ್ರಸ್ತಾಪಿಸಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಈ ಎಲ್ಲಾ ಹುದ್ದೆಗಳನ್ನು ಸೃಜಿಸಲು ಕಾನೂನಿನಲ್ಲಿ ಯಾವುದೇ ತೊಡಕು ಬಾರದಂತೆ ಕ್ರಮವಹಿಸಲಾಗಿದೆ.

ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸಲ್ಲಿಸಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಲಗತ್ತು ನಿಗಧಿತ ನಮೂನೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11-07-2012ರ ಸಂಖ್ಯೆ: ಬಿಬಿಎಂಪಿ(ಸಿ&ಆರ್)/ಪಿಆರ್/01/2007-08ರ ಟಿಪ್ಪಣಿ.

***<u>ನಿರ್ಣಯ:</u>***

ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆ ಹೊಂದಿ ಪಾಲಿಕೆಯ ವಿಸ್ತೀರ್ಣವು 226 ಚ.ಕಿ.ಮೀ.ಗಳಿಂದ 800 ಚ.ಕಿ.ಮೀ.ಗಳಿಗೆ ವಿಸ್ತೀರ್ಣಗೊಂಡಿದ್ದು, ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಹತ್ತು ಹಲವು ಹೊಸ ಹುದ್ದೆಗಳ ಸೃಜನೆ, ಅಗತ್ಯತೆಗೆ ಅನುಸಾರವಾಗಿ ಹಾಲಿ ಇರುವ ಹುದ್ದೆಗಳನ್ನು ಹೆಚ್ಚುವರಿಯಾಗಿ ಪರಿಷ್ಕರಿಸಲಾಗಿದ್ದು, ಈ ಹಿನ್ನಲೆಯಲ್ಲಿ 1971 ರಲ್ಲಿ ರಚಿಸಲಾಗಿದ್ದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪುನರ್ ಪರಿಷ್ಕರಿಸುವುದು ಅತ್ಯಗತ್ಯವಾಗಿದ್ದು, ಈ ಮೇರೆಗೆ ಪಾಲಿಕೆಯಲ್ಲಿ ಹಾಲಿ ಅನುಷ್ಠಾನದಲ್ಲಿರುವ ಎಲ್ಲಾ ಇಲಾಖಾ ಮುಖ್ಯಸ್ಥರುಗಳೊಂದಿಗೆ ಅವರುಗಳ ಇಲಾಖೆಯ ಕಾರ್ಯವೈಖರಿ ಕುರಿತಂತೆ ಕೂಲಂಕುಷವಾಗಿ ಚರ್ಚಿಸಿ ಅಗತ್ಯತೆಗೆ ಅನುಸಾರವಾಗಿ ಹುದ್ದೆಗಳನ್ನು ಸೃಜಿಸಲು ಹಾಗೂ ಹೆಚ್ಚುವರಿಯಾಗಿರುವ ಹುದ್ದೆಗಳನ್ನು ರದ್ದುಪಡಿಸಲು ಸಹ ಕ್ರಮಕೈಗೊಳ್ಳಲಾಗಿರುತ್ತದೆ. ಹಾಲಿ 1971 ರಲ್ಲಿ ರಚನೆಯಾದ ವೃಂದ ಮತ್ತು ನೇಮಕಾತಿ ನಿಯಮಾವಳಿಯ ರೀತ್ಯಾ ತಹಲ್‌ವರೆವಿಗೂ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆ ಹೊಂದಿದ ನಂತರ 198 ವಾರ್ಡ್‌ಗಳು ರಚನೆಗೊಂಡು ಈ ಎಲ್ಲಾ ವಾರ್ಡ್‌ಗಳಲ್ಲಿ ಸಮರ್ಪಕವಾಗಿ ಸಾರ್ವಜನಿಕರ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವ ಸಲುವಾಗಿ ಹಾಗೂ ಪಾಲಿಕೆಯ ಆರ್ಥಿಕ ಸ್ಥಿತಿಗತಿಯನ್ನು ಪರಿಗಣಿಸಿ ಅಗತ್ಯತೆಗೆ ಅನುಸಾರವಾಗಿ ಹೊಸ ಹುದ್ದೆಗಳನ್ನು ಸೃಜಿಸಿರುವುದೇ ಅಲ್ಲದೆ ಪಾಲಿಕೆಯಲ್ಲಿ ಉಪಯುಕ್ತತೆ ಇಲ್ಲದೇ ಇರುವ ಹುದ್ದೆಗಳನ್ನು ಸಹ ರದ್ದುಪಡಿಸುವಲ್ಲಿ ಸಮಿತಿಯು ಅಧಿಕಾರಿಗಳ ಸಹಯೋಗದೊಂದಿಗೆ ಸಾಕಷ್ಟು ಕಸರತ್ತನ್ನು ಮಾಡಿರುತ್ತದೆ. ಈ ನಿಟ್ಟಿನಲ್ಲಿ ಪಶುಸಂಗೋಪನಾ ಇಲಾಖೆ, ಅರಣ್ಯ ಇಲಾಖೆಯಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿದ್ದ

ಹುದ್ದೆಗಳನ್ನು ರದ್ದುಪಡಿಸಲಾಗಿರುತ್ತದೆ. ಇದರಿಂದ ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಹತೋಟಿಯಲ್ಲಿಡಲು ಸಾಧ್ಯವಾಗಿರುತ್ತದೆ.

ಅತಿ ಮುಖ್ಯವಾಗಿ ಪಾಲಿಕೆಯ 8 ವಲಯ ಕಛೇರಿ ಹಾಗೂ ಕೇಂದ್ರ ಕಛೇರಿಯಲ್ಲಿ ಮಂಜೂರಾತಿಯಿಲ್ಲದ ಹುದ್ದೆಗಳಿಗೆ IFS, IAS, KAS ಹಾಗೂ ಈ ಶ್ರೇಣಿಗಳಲ್ಲದ ಹಿರಿಯ ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದು, ಈ ಪ್ರಕ್ರಿಯೆಯಿಂದಾಗಿ ಸದರಿ ಅಧಿಕಾರಿಗಳಿಗೆ ಯಾವುದೇ ವಿಧವಾದ ಹೆಚ್ಚುವರಿ ಕೆಲಸ ಕಾರ್ಯಗಳು ಇಲ್ಲದ ಹೊರತಾಗಿಯು ಈ ಹುದ್ದೆಗಳಲ್ಲಿ ಕೆಳಹಂತದ ಅಧಿಕಾರಿಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು, ಇದರಿಂದಾಗಿ ಹೆಚ್ಚುವರಿ ಹುದ್ದೆಯಲ್ಲಿನ ಅಧಿಕಾರಿಗಳ ವೇತನ ಹಾಗೂ ಅವರುಗಳ ಕಛೇರಿ ನಿರ್ವಹಣೆಗಾಗಿ ಅಧಿಕ ಪ್ರಮಾಣದಲ್ಲಿ ಆರ್ಥಿಕ ವೆಚ್ಚವಾಗುತ್ತಿದ್ದು, ಇವುಗಳನ್ನು ತಡೆಗಟ್ಟಿದ ಪಕ್ಷದಲ್ಲಿ ಪಾಲಿಕೆಗೆ ಹೆಚ್ಚಿನ ಉಳಿತಾಯವನ್ನು ಕಾಣಬಹುದಾಗಿರುವುದರಿಂದ ಈ ನಿಟ್ಟಿನಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಜಂಟಿ ಆಯುಕ್ತರು (ಕಲ್ಯಾಣ) ಹಾಗೂ 8 ವಲಯಗಳಲ್ಲಿನ ಉಪ ಆಯುಕ್ತರುಗಳ ಹುದ್ದೆಯನ್ನು ರದ್ದುಪಡಿಸಲಾಗಿರುತ್ತದೆ ಹಾಗೂ ಇನ್ನು ಮುಂದೆ IFS, IAS, KAS ಅಲ್ಲದ ಅಧಿಕಾರಿಗಳನ್ನು ಯಾವುದೇ ಸಂದರ್ಭದಲ್ಲಿಯು ನಿಯೋಜಿಸತಕ್ಕದ್ದಲ್ಲವೆಂದು ಸರ್ಕಾರವನ್ನು ಕೋರಲು ಜಂಟಿ ಸಮಿತಿಯು ತೀರ್ಮಾನಿಸಿರುತ್ತದೆ. ಇದೇ ರೀತಿ ಕಾಮಗಾರಿ ಇಲಾಖೆಯಲ್ಲಿಯು ಸಹ ಮಂಜೂರಾತಿಯಾದ ಹುದ್ದೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆಗೊಳ್ಳುತ್ತಿರುವುದೇ ಅಲ್ಲದೆ ಈ ಹಿಂದಿನ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕೇವಲ ಲೋಕೋಪಯೋಗಿ ಇಲಾಖೆಯಿಂದ ಮಾತ್ರ ಎರವಲು ಸೇವೆಯ ಮೇಲೆ ನಿಯೋಜನೆ ಹೊಂದಲು ಅವಕಾಶವಿದ್ದು, ಇದನ್ನು ಹೊರತುಪಡಿಸಿ ಸರ್ಕಾರದ ಅಂಗ ಸಂಸ್ಥೆಗಳಾದ KSFC, BESCOM, KPTCL ಹಾಗೂ ಇನ್ನಿತರೆ ಸಂಸ್ಥೆಗಳಿಂದ ಅಭಿಯಂತರರುಗಳು ಹಾಗೂ ಇನ್ನಿತರ B ಮತ್ತು C ದರ್ಜೆ ಸಿಬ್ಬಂದಿಗಳನ್ನು ಸರ್ಕಾರವು ಪಾಲಿಕೆಯ ಸೇವೆಗೆ ನಿಯೋಜಿಸುತ್ತಿದ್ದು, ಇದರಿಂದಾಗಿ ಮೇಲ್ಕಂಡ ಸರ್ಕಾರದ ಅಂಗ ಸಂಸ್ಥೆಗಳ ಸಿಬ್ಬಂದಿ ವೇತನವು ಸರ್ಕಾರದ ಲೋಕೋಪಯೋಗಿ ಇಲಾಖೆಯ ಸಿಬ್ಬಂದಿಗಳ ವೇತನ ಶ್ರೇಣಿಗಿಂತ ಹೆಚ್ಚುವರಿಯಾಗಿದ್ದು, ಪಾಲಿಕೆಯ ಹಾಗೂ ಲೋಕೋಪಯೋಗಿ ಇಲಾಖೆಯ ಅಭಿಯಂತರರುಗಳು ನಿರ್ವಹಿಸುವ ಕಛೇರಿ ಕೆಲಸ ಕಾರ್ಯವನ್ನು ಸರ್ಕಾರಿ ಅಂಗ ಸಂಸ್ಥೆಯ ಅಭಿಯಂತರರುಗಳು ನಿರ್ವಹಿಸಿದ್ದಾಗ್ಯೂ ಸಹ ಅವರು ಹೆಚ್ಚುವರಿ ವೇತನವನ್ನು ಪಡೆಯುತ್ತಿದ್ದು, ಇದರಿಂದಾಗಿ ಪಾಲಿಕೆಗೆ ಹೆಚ್ಚುವರಿಯಾಗಿ ಆರ್ಥಿಕ



ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಗಳನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮಕೈಗೊಳ್ಳುತ್ತಿರುವುದರಿಂದ ಇನ್ನು ಮುಂದೆ ಹೊರ ಗುತ್ತಿಗೆ ಆಧಾರದ ಮೇಲೆ DEO ಗಳನ್ನು ನೇಮಕ ಮಾಡಿಕೊಳ್ಳುವ ಕ್ರಮವನ್ನು ರದ್ದುಗೊಳಿಸಲು ಜಂಟಿ ಸಮಿತಿಯು ತೀರ್ಮಾನಿಸಿದೆ. ಇದೇ ಆಧಾರದ ಮೇಲೆ ಪಾಲಿಕೆಯಲ್ಲಿ ಹಾಲಿ ಖಾಲಿ ಇರುವ ಶಿಕ್ಷಕರುಗಳ ಹುದ್ದೆಗೆ ಸಹ ಹೊರಗುತ್ತಿಗೆ ಆಧಾರದ ಮೇಲೆ ನೇಮಕಮಾಡಿಕೊಳ್ಳುತ್ತಿದ್ದು, ಈ ಒಂದು ಪ್ರಕ್ರಿಯೆಯಲ್ಲಿಯು ಸಹ ಅಗತ್ಯತೆಗಿಂತ ಅಧಿಕವಾಗಿ ಅಂದರೆ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆಯ ಅನುಪಾತವನ್ನು ಸಮಂಜಸವಾಗಿ ಪರಿಗಣಿಸದೆ ಮನಸೋ ಇಚ್ಚೆಯಂತೆ ನೇಮಕ ಮಾಡಿಕೊಳ್ಳುತ್ತಿರುವುದೇ ಅಲ್ಲದೆ ಕೇವಲ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರುಗಳನ್ನು ನೇಮಿಸಿಕೊಳ್ಳುತ್ತಿರುವುದರಿಂದ ಪಾಲಿಕೆಗೆ ಹೆಚ್ಚುವರಿಯಾಗಿ ಆರ್ಥಿಕ ನಷ್ಟ ಉಂಟಾಗುತ್ತಿರುವುದೇ ಅಲ್ಲದೆ ಸದರಿ ಶಿಕ್ಷಕರುಗಳು ವಿದ್ಯಾರ್ಥಿಗಳಿಗೆ ಬೋಧನ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಅರ್ಹರಿರುವರೆ ಎಂಬ ಬಗ್ಗೆ ಯಾವೊಬ್ಬ ಅಧಿಕಾರಿಗಳು ಪರಿಶೀಲಿಸದೆ ಇರುವುದು ಈ ಒಂದು ಸಂದರ್ಭದಲ್ಲಿ ಗಮನಿಸಬಹುದಾಗಿದ್ದು, ಈ ಹಿನ್ನಲೆಯಲ್ಲಿ, ಪಾಲಿಕೆಯ ವಿದ್ಯಾ ಇಲಾಖೆಯ ಹಿತದೃಷ್ಟಿಯಿಂದ ಕೂಡಲೇ ಶಿಕ್ಷಕರುಗಳನ್ನು ನೇರ ನೇಮಕಾತಿಯ ಮೂಲಕ ತುಂಬಲು ಕೂಡಲೆ ಸೂಕ್ತ ಅನುಮತಿಯನ್ನು ನೀಡಲು ಸರ್ಕಾರವನ್ನು ಕೋರಲು ಜಂಟಿ ಸಮಿತಿಯು ತೀರ್ಮಾನಿಸುತ್ತದೆ. ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕರುಗಳು ಅವರುಗಳು ಕಾರ್ಯನಿರ್ವಹಿಸುತ್ತಿರುವ ಕಛೇರಿಗಳಲ್ಲಿಯೇ ವೇತನ ಬಟವಾಡೆ ಪಡೆಯುತ್ತಿದ್ದು, ಇದರಿಂದಾಗಿ 8 ವಲಯ ಕಛೇರಿ ಹಾಗೂ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕರುಗಳ ಬಗ್ಗೆ ಸಮರ್ಪಕವಾದ ಮಾಹಿತಿ ಇಲ್ಲದೆ ಇರುವುದರಿಂದ ಎಲ್ಲಾ ಚಾಲಕರುಗಳ ಪೂರ್ಣ ಪ್ರಮಾಣದ ಮಾಹಿತಿಯ ಕೊರತೆ ಇರುವುದರಿಂದ ಎಲ್ಲಾ ಚಾಲಕರುಗಳ ಸೇವಾ ವಿವರವನ್ನು ಕೇಂದ್ರ ಕಛೇರಿಯಲ್ಲಿಯೇ ವ್ಯವಹರಿಸುವ ಸಲುವಾಗಿ ಸೂಕ್ತ ಕ್ರಮಕೈಗೊಂಡು ಅವರುಗಳು ಕಾರ್ಯನಿರ್ವಹಿಸುವ ಕಛೇರಿಯ ಅಗತ್ಯ ಮಾಹಿತಿಯನ್ನು ದಾಖಲು ಮಾಡುವುದು ಸೂಕ್ತವೆಂದು ಅಭಿಪ್ರಾಯಿಸಿ ಕೇಂದ್ರ ಕಛೇರಿಯಲ್ಲಿರುವ ಸಾರಿಗೆ ಅಧಿಕಾರಿಗಳ ನಿಯಂತ್ರಣದಲ್ಲಿ ಎಲ್ಲಾ ಚಾಲಕರುಗಳ ಸೇವಾ ಪುಸ್ತಕವನ್ನು ಸಂಗ್ರಹಿಸಿಟ್ಟ ಪಕ್ಷದಲ್ಲಿ ಪಾಲಿಕೆಯ ವಾಹನಗಳ ದುರುಪಯೋಗವನ್ನು ತಡೆಗಟ್ಟುವುದೇ ಅಲ್ಲದೆ ಇಂಧನಗಳ ದುಂದು ವೆಚ್ಚವನ್ನು ನಿಯಂತ್ರಿಸಬಹುದೆಂದು ಜಂಟಿ ಸಮಿತಿಯು ತೀರ್ಮಾನಿಸಿದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಹೊರೆಯುಂಟಾಗುತ್ತಿದ್ದು, ಸರ್ಕಾರದ ಅಂಗಸಂಸ್ಥೆಯ ಎರವಲು ಸೇವೆಯ ನಿಯೋಜನೆಯ ಸಿಬ್ಬಂದಿಗಳು ಕಟ್ಟುನಿಟ್ಟಾಗಿ ನಿಯಂತ್ರಿಸುವುದು ಅತ್ಯಾವಶ್ಯಕವಾಗಿರುತ್ತದೆ. 1977ರ ಕೆ.ಎಂ.ಸಿ ಕಾಯ್ದೆ ನಿಯಮ 26(ಎ) ರೀತ್ಯಾ ಆಯುಕ್ತರು ಯಾವುದೇ ಅಧಿಕಾರಿಯನ್ನು ಸರ್ಕಾರದಿಂದ ಎರವಲು ಸೇವೆಯ ಮೇಲೆ ಅವನು ಹೆಚ್ಚಿನ ಪರಿಣಿತಿ ಹಾಗೂ ಹೆಚ್ಚಿನ ಅನುಭವದ ಆಧಾರದ ಮೇಲೆ ಪಾಲಿಕೆಯ ಸೇವೆಗೆ ತೆಗೆದುಕೊಳ್ಳಲು ಅವಕಾಶವಿದ್ದು ಈ ಪ್ರಕ್ರಿಯೆಯಿಂದಾಗಿ ಪಾಲಿಕೆಯ ಆರ್ಥಿಕ ಸ್ಥಿತಿಗತಿಗೆ ನಷ್ಟ ಉಂಟಾಗುತ್ತಿರುವ ಕಾರಣ, ದಿನಾಂಕ:08.08.2011ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಸದರಿ ನಿಯಮವನ್ನು ತಿದ್ದುಪಡಿ ಮಾಡಲು ತೀರ್ಮಾನಿಸಲಾಗಿರುತ್ತದೆ. ಈ ಪ್ರಸ್ತಾವನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಜಂಟಿ ಸಮಿತಿಯು ಸ್ಪಷ್ಟವಾಗಿ ನಿರ್ದೇಶನ ನೀಡಿರುತ್ತದೆ. ಪಾಲಿಕೆಯಲ್ಲಿ ಅತಿ ಮುಖ್ಯವಾಗಿ ಹೊರಗುತ್ತಿಗೆ ಆಧಾರದ ಮೇಲೆ ಹಲವು ವೃಂದದ ಸಿಬ್ಬಂದಿಗಳನ್ನು ನೇಮಕಮಾಡಿಕೊಳ್ಳುವುದು ವಾಡಿಕೆಯಾಗಿದ್ದು, ಈ ನೇಮಕವು ಹಲವು ವಿಧವಾದ ಲೋಪದೋಷಗಳಿಂದ ಕೂಡಿದ್ದು, ಈ ಪ್ರಕ್ರಿಯೆಯಿಂದಾಗಿ (ಉದಾಹರಣೆಗೆ D.E.O ಹಾಗೂ ಶಿಕ್ಷಕರುಗಳನ್ನು) ಅಗತ್ಯತೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೊರಗುತ್ತಿಗೆ ನೌಕರರುಗಳು ಪಾಲಿಕೆಯಲ್ಲಿ ನಿಗಧಿತ ಅವರಿಗೆ ಕಾರ್ಯನಿರ್ವಹಿಸಲು ನೇಮಕಗೊಂಡಿದ್ದು, ಸದರಿ ಹುದ್ದೆಗೆ ಅವಶ್ಯವಿರುವ ವಿದ್ಯಾರ್ಹತೆ ಇಲ್ಲದಿದ್ದಾಗ್ಯೂ ಸಹ ಗುತ್ತಿಗೆದಾರ ಸಂಸ್ಥೆಯು ಈ ಬಗ್ಗೆ ಗಮನಹರಿಸದೆ ಕಾರ್ಯ ಪ್ರವೃತ್ತರಾಗಿರುವುದರಿಂದ ಪಾಲಿಕೆಗೆ ಹೆಚ್ಚುವರಿ ನಷ್ಟ ಉಂಟಾಗಿರುವುದೇ ಅಲ್ಲದೆ, ಸದರಿ ಗುತ್ತಿಗೆ ನೌಕರರಿಂದ ಹಲವು ವಿಧವಾದ ಕರ್ತವ್ಯ ಲೋಪದೋಷಗಳು ಉಂಟಾಗುತ್ತಿದ್ದು, ಈ ಬಗ್ಗೆ ಸಂಬಂಧಿಸಿದ ಬಟವಾಡೆ ಅಧಿಕಾರಿಗಳು ಮೇಲ್ಕಂಡ ಹೊರಗುತ್ತಿಗೆ ನೌಕರರುಗಳನ್ನು ನಿಯಂತ್ರಿಸುವಲ್ಲಿ ಪೂರ್ಣ ಪ್ರಮಾಣದಲ್ಲಿ ವಿಫಲರಾಗಿರುವುದರಿಂದ ಇನ್ನು ಮುಂದೆ ಪಾಲಿಕೆಯಲ್ಲಿ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣ ಪ್ರಮಾಣದಲ್ಲಿ ತಡೆಹಿಡಿಯಲು ಜಂಟಿ ಸಮಿತಿಯು ತೀಮಾನಿಸುತ್ತಾ, ಇತ್ತೀಚಿನ ಸರ್ಕಾರದ ಆದೇಶದ ರೀತ್ಯಾ ನೇರನೇಮಕಾತಿ ಹೊಂದುವ ಸಂದರ್ಭದಲ್ಲಿನ ನೌಕರರು ಗಣಕಯಂತ್ರ ವಿಷಯದಲ್ಲಿ ವಿದ್ಯಾರ್ಹತೆ ಅವಶ್ಯವೆಂದು ಆದೇಶಿಸಿದ್ದು ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಪೈಕಿ ಗಣಕಯಂತ್ರ ವಿಷಯದಲ್ಲಿ ಅಗತ್ಯ ವಿದ್ಯಾರ್ಹತೆಯನ್ನು ನಿಗಧಿತ ಅವಧಿಯಲ್ಲಿ ಉತ್ತೀರ್ಣರಾಗತಕ್ಕದೆಂದು ತಿಳಿಸಿದ್ದು, ಈ ಮೇರೆಗೆ ಎಲ್ಲಾ ವಿಷಯ ನಿರ್ವಾಹಕರು ಹಾಗೂ C ದರ್ಜೆ ಸಿಬ್ಬಂದಿ ವರ್ಗದವರಿಗೆ ಗಣಕಯಂತ್ರ ವಿಷಯದಲ್ಲಿ

ಹಾಲಿ ಪಾಲಿಕೆಯ ಕಲ್ಯಾಣ ಇಲಾಖೆಯಲ್ಲಿ ಸರ್ಕಾರವು ಹಲವು ಹತ್ತು ಯೋಜನೆಗಳನ್ನು ರೂಪಿಸಲು ಶೇ.22.75ರ ಅಡಿಯಲ್ಲಿ ಹೆಚ್ಚಿನ ಮೊತ್ತದ ಅನುಧಾನವನ್ನು ನಿಗಧಿಪಡಿಸಿದ್ದು, ಈ ಅನುದಾನದಡಿಯಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಮೇಲ್ಕಂಡ ಅನುದಾನದಡಿಯಲ್ಲಿ ಕಾರ್ಯಪ್ರವೃತ್ತರಾಗಲು ಆದೇಶಿಸಿದ್ದರೂ ಸಹ ಈ ಒಂದು ಪ್ರಕ್ರಿಯೆಯಲ್ಲಿ ಸಮರ್ಪಕವಾದ ರೀತಿಯಲ್ಲಿ ಯೋಜನೆಗಳು ಕಾರ್ಯಗತಗೊಳ್ಳುವಲ್ಲಿ ವಿಫಲವಾಗುತ್ತಿದ್ದು, ಈ ಹಿನ್ನಲೆಯಲ್ಲಿ, ವಲಯ ಮಟ್ಟದಲ್ಲಿ ಸಹಾಯಕ ಕಲ್ಯಾಣ ಅಧಿಕಾರಿಗಳನ್ನು ನೇಮಕ ಮಾಡಲು ಸದರಿ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಜಂಟಿ ಸಮಿತಿಯು ತೀರ್ಮಾನಿಸಿದ್ದು ಹಾಗೂ ಹಾಲಿ ಕೇಂದ್ರ ಕಛೇರಿಯಲ್ಲಿ ಇರುವ ಜಂಟಿ ಆಯುಕ್ತರು (ಕಲ್ಯಾಣ), ಉಪ ಆಯುಕ್ತರು (ಕಲ್ಯಾಣ) ಮತ್ತು ಕಲ್ಯಾಣ ಅಧಿಕಾರಿಗಳ ಹುದ್ದೆಯಿದ್ದು, ಅನಾವಶ್ಯಕವಾಗಿ ಹೆಚ್ಚುವರಿ ಹುದ್ದೆ ಇರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಜಂಟಿ ಆಯುಕ್ತರು (ಕಲ್ಯಾಣ) ಹುದ್ದೆಯನ್ನು ರದ್ದುಪಡಿಸುವುದು ಸೂಕ್ತವೆಂದು ಜಂಟಿ ಸಮಿತಿಯು ತೀರ್ಮಾನಿಸಿರುತ್ತದೆ. ಕಾಮಗಾರಿ ಇಲಾಖೆಯಲ್ಲಿ ಹಾಲಿ ಮಂಜೂರಾತಿಯಲ್ಲಿರುವ ಗ್ಯಾಂಗ್‌ಮೆನ್‌ಗಳ ಪೈಕಿ ಶೇ.50 ಕ್ಕಿಂತ ಕಡಿಮೆ ಹುದ್ದೆಗಳಲ್ಲಿ ಮಾತ್ರ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಹಾಲಿ ಪಾಲಿಕೆಯಲ್ಲಿ ತುಂಡು ಹೊರಗುತ್ತಿಗೆ ಪದ್ಧತಿಯಲ್ಲಿ ವಾರ್ಡ್ ಮಟ್ಟದಲ್ಲಿ ರಸ್ತೆಗಳಲ್ಲಿನ ಗುಂಡಿ ಮುಚ್ಚುವ ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ಈ ಹಿನ್ನಲೆಯಲ್ಲಿ ಮಂಜೂರಾತಿ ಹುದ್ದೆಗಳ ಪೈಕಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ಯಾಂಗ್‌ಮೆನ್‌ಗಳಿಗೆ ಯಾವುದೇ ವಿಧವಾದ ಕೆಲಸಕಾರ್ಯಗಳಿಲ್ಲದೆ ಇರುವ ಹಿನ್ನಲೆಯಲ್ಲಿ ಹಾಗೂ ಕಾರ್ಯನಿರ್ವಹಿಸುತ್ತಿರುವ ಕೆಲವೆ ಮಂದಿ ನೌಕರರುಗಳ ಪೈಕಿ ಹಲವು ಮಂದಿ ನಿಯೋಜನೆ ಮೇರೆಗೆ ಇತರೆ ಕಛೇರಿಗಳಲ್ಲಿ ಗ್ಯಾಂಗ್‌ಮೆನ್ ಅಲ್ಲದ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ, ಈ ಪ್ರಸ್ತುತ ಈ ಹುದ್ದೆಯು ಅವಶ್ಯಕತೆ ಇಲ್ಲದಿರುವುದರಿಂದ ಸದರಿ ಹುದ್ದೆಯನ್ನು ರದ್ದು ಪಡಿಸಲು ಜಂಟಿ ಸಮಿತಿಯು ತೀರ್ಮಾನಿಸಿರುತ್ತದೆ. ಇದೇ ನಿಟ್ಟಿನಲ್ಲಿ ನಗರ ಯೋಜನೆ ವಿಭಾಗದಲ್ಲಿಯೂ ಸಹ ಹೆಚ್ಚುವರಿಯಾಗಿದ್ದಂತಹ ಹುದ್ದೆಗಳನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಹಾಲಿ ಇರುವ ಎರಡು ಜಂಟಿ ನಿರ್ದೇಶಕರ ಹುದ್ದೆಯನ್ನು ರದ್ದು ಪಡಿಸಲಾಗಿರುತ್ತದೆ ಹಾಗೂ 8 ವಲಯಗಳಿಗೆ ವಲಯಕ್ಕೆ ಒಂದು ಸಹಾಯಕ ನಿರ್ದೇಶಕರ ಹುದ್ದೆಯನ್ನು ಮಾತ್ರ ನಿಗಧಿ ಪಡಿಸಲಾಗಿರುತ್ತದೆ. ಪಾಲಿಕೆಯ ಲೆಕ್ಕ ಪತ್ರ ಇಲಾಖೆಯಲ್ಲಿ ಈ ಹಿಂದೆ ಶೇಕಡ 75 ರಷ್ಟು ಹುದ್ದೆಗಳನ್ನು ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಎರವಲು ಸೇವೆಯ ಮೂಲಕ, ಉಳಿದ ಹುದ್ದೆಗಳನ್ನು ಪಾಲಿಕೆಯ ನೌಕರರ ವೃಂದದಿಂದ ತುಂಬುತ್ತಿದ್ದು

ಇದರಿಂದಾಗಿ ಎರವಲು ಸೇವೆಯ ಮೇಲೆ ಬರುವ ಸಿಬ್ಬಂದಿಗಳನ್ನು ನಿಯಂತ್ರಣದಲ್ಲಿರಿಸಲು ಸಾಧ್ಯವಾಗದೇ ಇರುವ ಕಾರಣ ಹಾಲಿ ಈ ಶೇಕಡಾವಾರು ಅದಲುಬದಲು ಮಾಡಿ ಪಾಲಿಕೆಯ ಸಿಬ್ಬಂದಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿಯು ಹಾಗೂ ಎರವಲು ಸೇವೆಯ ಮೇಲಿನ ಸಿಬ್ಬಂದಿಗಳನ್ನು ಕಡಿಮೆ ಸಂಖ್ಯೆಯಲ್ಲಿ ನಿಯೋಜಿಸಿಕೊಳ್ಳಲು ಸಮಿತಿಗಳು ತೀರ್ಮಾನಿಸಿದ್ದು, ಇದರಿಂದಾಗಿ ಸಿಬ್ಬಂದಿಗಳ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗುವುದೆಂದು ಜಂಟಿ ಸಮಿತಿಗಳು ಅಭಿಪ್ರಾಯಿಸಿ ನಿರ್ಣಯಿಸಿವೆ. ಇದೇ ರೀತಿ ಕಂದಾಯ ಇಲಾಖೆಯಲಿ ಪ್ರಸ್ಥುತ ಮೌಲ್ಯ ಮಾಪಕರ 74 ಹುದ್ದೆ ಮಂಜೂರಾತಿಯಾಗಿದ್ದು, ಸಹಾಯಕ ಕಂದಾಯ ಅಧಿಕಾರಿ ಹುದ್ದೆಯನ್ನು ಮೌಲ್ಯಮಾಪಕರ, ವ್ಯವಸ್ಥಾಪಕರ ಹಾಗೂ ವರದಿಗಾರರ ಹುದ್ದೆಯಿಂದ 5:5:1 ರ ಅನುಪಾತದಲ್ಲಿ ತುಂಬ ಬೇಕಾಗಿದ್ದು ಹಾಲಿ ಇರುವ 74 ಮಂದಿ ಮೌಲ್ಯಮಾಪಕರ ಮಂಜೂರಾತಿ ಹುದ್ದೆ ಹಾಗೂ ವ್ಯವಸ್ಥಾಪಕರ 152 ಮಂಜೂರಾತಿ ಹುದ್ದೆಗಳಿದ್ದು ಮುಂದಿನ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಅನುಪಾತದ ಪ್ರಮಾಣವು ಸಮಾನಂತರ ಪ್ರಮಾಣದಲ್ಲಿ ಬಾರದೇ ಇರುವ ಕಾರಣ, ಹಾಲಿ ಈ ಇಲಾಖೆಯಲ್ಲಿರುವ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಮಂಜೂರಾತಿ ಹುದ್ದೆಗಳು 132 ಇದ್ದು ಈ ಪೈಕಿ 40 ಹುದ್ದೆಗಳನ್ನು ಮೌಲ್ಯಮಾಪಕರ ಹುದ್ದೆಗೆ ಸ್ಥಳಾಂತರಿಸಿ ಹಾಲಿ ಇರುವ 74 ಹುದ್ದೆಗಳನ್ನು 114 ಹುದ್ದೆಗಳಿಗೆ ಹೆಚ್ಚುವರಿ ಮಾಡಲಾಗಿದೆ. ಕಂದಾಯ ಇಲಾಖೆಯಲ್ಲಿ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು ಹಾಗೂ ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರು ಹುದ್ದೆಗಳ ಕಾರ್ಯವೈಖರಿ ಒಂದೇ ಆಗಿರುವುದರಿಂದ ಈ ಎರಡು ವೃಂದದ ಹುದ್ದೆಗಳನ್ನು ಒಗ್ಗೂಡಿಸಿ ಕಂದಾಯ ಪರಿವೀಕ್ಷಕರು ಎಂದು ನಾಮಾಂಕಿತಗೊಳಿಸಲಾಗಿದೆ. ಹಾಲಿ ಪೂಜ್ಯ ಮಹಾಪೌರರ ಹಾಗೂ ಮಾನ್ಯ ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳ ಹುದ್ದೆಯನ್ನು ಸಹಾಯಕ ಕಂದಾಯ ಅಧಿಕಾರಿ ವೃಂದದಿಂದ ತುಂಬಲು ಹಾಗೂ ಹಾಲಿ 12 ಸ್ಥಾಯಿ ಸಮಿತಿಗಳು ಅಸ್ಥಿತ್ವದಲ್ಲಿರುವುದರಿಂದ ಸಹಾಯಕ ಕಂದಾಯ ಅಧಿಕಾರಿ ವೃಂದದ ಒಬ್ಬ ಅಧಿಕಾರಿಯನ್ನು ವಿಶೇಷ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ಹುದ್ದೆಯೊಂದನ್ನು ಸೃಜಿಸಿರುವುದರಿಂದ ಸಮಿತಿಗಳ ಕಾರ್ಯ ಕಲಾಪಗಳು ಸುಗಮವಾಗಿ ನಡೆಯಲು ಸಹಕಾರಿಯಾಗಿರುತ್ತದೆ. ಹಿಂದೆ 8 ವರದಿಗಾರರ ಹುದ್ದೆಗಳಿದ್ದು ಹಾಲಿ 4 ಹುದ್ದೆಗಳನ್ನು ಅಧಿಕವಾಗಿ ಸೃಜಿಸಿ ಒಟ್ಟು 12 ವರದಿಗಾರರ ಹುದ್ದೆಯಿಂದ ಕೌನ್ಸಿಲ್ ಕಾರ್ಯಕಲಾಪಗಳನ್ನು ನಿರ್ವಹಿಸಲು ಸುಗಮವಾಗಿರುತ್ತದೆ. ಕಾನೂನು ಇಲಾಖೆಯನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ 8 ವಲಯಗಳಿಗೆ ಸಂಬಂಧಿಸಿದಂತೆ 4 ಉಪ ಕಾನೂನು ಅಧಿಕಾರಿಗಳು (ತಲಾ 2 ವಲಯಗಳಿಗೆ



ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಒಬ್ಬರಂತೆ), 8 ಸಹಾಯಕ ಕಾನೂನು ಅಧಿಕಾರಿಗಳು ಹಾಗೂ 8 ಕಿರಿಯ ಕಾನೂನು ಅಧಿಕಾರಿಗಳನ್ನು (8 ವಲಯಗಳಿಗೆ ಕ್ರಮವಾಗಿ ತಲಾ ಒಬ್ಬರಂತೆ) ನೇಮಕ ಮಾಡಿ ಆಯಾ ವಲಯ ವ್ಯಾಪ್ತಿಯಲ್ಲಿಯೇ ಸುಗಮವಾಗಿ ಕಛೇರಿ ಕಾರ್ಯಗಳು ನೆರವೇರಲು ಕ್ರಮ ಜರುಗಿಸಲು ಜಂಟಿ ಸಮಿತಿಯು ತೀರ್ಮಾನಿಸಿರುತ್ತದೆ.

ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಹಲವಾರು ಹೊಸ ಹುದ್ದೆಗಳನ್ನು ಸೃಜಿಸುವುದು ಅತ್ಯವಶ್ಯಕವಾಗಿರುವ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ **ಆಯುಕ್ತರು ಮಂಡಿಸಿರುವ ದಿನಾಂಕ:11-07-2012ರ ಸಂಖ್ಯೆ:ಬಿಬಿಎಂಪಿ(ಸಿ&ಆರ್)/ಪಿಆರ್/01/2007-08ರ ಕರಡು ಟಿಪ್ಪಣಿಯನ್ನು ಭಾಗಶಃ ಮಾರ್ಪಾಡಿನೊಂದಿಗೆ ಪಾಲಿಕೆಯ ಸಭೆಯ ಅನುಮೋದನೆ ಹಾಗೂ ಸರ್ಕಾರದ ಅನುಮೋದನೆಗೆ ಕೋರಲು ಒಪ್ಪಿರುವ ಜಂಟಿ ಸಮಿತಿ ಸಭೆಯ ನಿರ್ಣಯ.**

| | |
|---|---|
| ಅಧ್ಯಕ್ಷರು | ಅಧ್ಯಕ್ಷರು |
| ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ | ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:19.11.2012ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಆಡಳಿತಾತ್ಮಕ ವಿಷಯ ಕುರಿತಂತೆ ಪಾಲಿಕೆಯ ವಿದ್ಯಾಧಿಕಾರಿಗಳ ಕಛೇರಿಯ ತಪಾಸಣೆಯ ವರದಿ:

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಮೋಹನ್ ಕುಮಾರ್ | ಸದಸ್ಯರು | ವಿಶೇಷ ಅಧಿಕಾರಿಗಳು |
| 3 | ಶಾಂತಕುಮಾರಿ | ಸದಸ್ಯರು | ವಿದ್ಯಾಧಿಕಾರಿಗಳು |
| 4 | ಮುರುಗೇಶ್ ಮೊದಲಿಯಾರ್ | ಸದಸ್ಯರು | ಸಹಾಯಕ ವಿದ್ಯಾಧಿಕಾರಿಗಳು |
| 5 | ರವೀಂದ್ರನ್ | | ಆಯುಕ್ತರ ಕಛೇರಿ ನೋಡಲ್ ಅಧಿಕಾರಿಗಳು |
| 6 | ಅಬ್ದುಲ್ ರಖೀಬ್ ಝುಕಿರ್ | ಸದಸ್ಯರು | |
| 7 | ಎಲ್.ನಾಗರತ್ನ | ಸದಸ್ಯರು | |
| 8 | ಭುವನೇಶ್ವರಿ ಜೆ. | ಸದಸ್ಯರು | |

*********

ದಿನಾಂಕ:19.11.2012ರಂದು ಬೆಳಿಗ್ಗೆ 11.00 ಗಂಟೆಗೆ ಸಮಿತಿಯು ವಿದ್ಯಾಧಿಕಾರಿಗಳ ಕಛೇರಿಯ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ ಕಛೇರಿಯಲ್ಲಿ 4ನೇ ದರ್ಜೆ ನೌಕರರು ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡು ಬಂದಿದ್ದು, ಕೂಡಲೆ ಹೆಚ್ಚುವರಿ ಸಿಬ್ಬಂದಿಗಳನ್ನು ಅವಶ್ಯಕವಿರುವ ಕಛೇರಿಗೆ ವರ್ಗಾಹಿಸಲು ಅಭಿಪ್ರಾಯಿಸುತ್ತದೆ. ಕಛೇರಿಯಲ್ಲಿ ಚಲನ ವಲನ ಪುಸ್ತಕ, ಪಿಆರ್ ವಹಿಗಳು ಹಾಗೂ ಇತರೆ ಕಛೇರಿ ದಾಖಲಾತಿಗಳನ್ನು ಸಮರ್ಪಕವಾದ ರೀತಿಯಲ್ಲಿ ಬಟವಾಡೆ ಅಧಿಕಾರಿಗಳಿಂದ ದೃಡೀಕರಿಸದೆ ಆಡಳಿತಾತ್ಮಕವಾಗಿ ಪಾಲಿಸಬೇಕಾದ ನಿಯಮಾವಳಿಗಳನ್ನು ಪಾಲಿಸದೇ ಇರುವುದು ಕಂಡು ಬಂದಿರುತ್ತದೆ ಹಾಗೂ ಮುಖ್ಯವಾಗಿ ಕಛೇರಿಯಲ್ಲಿ ನಿರ್ವಹಿಸಬೇಕಾದ ಬಿ.ಆರ್ ವಹಿಗಳು, ದಾಸ್ತಾನು ವಹಿ, ಸಾಮಗ್ರಿಗಳ ವಿತರಣೆ ವಹಿಗಳನ್ನು ನಿರ್ವಹಿಸದೆ ಕಛೇರಿಯ ಯಾವ ದಾಖಲಾತಿಗಳನ್ನು ಸಮರ್ಪಕವಾಗಿ ಇಡದೇ ಇರುವುದು ಸಹ ತಪಾಸಣೆ ವೇಳೆ ಕಂಡುಬಂದಿರುತ್ತದೆ.

ಈ ಸಂದರ್ಭದಲ್ಲಿ ಹಾಜರಿದ್ದ ವಿದ್ಯಾಧಿಕಾರಿಗಳನ್ನು ಕೇಳಲಾಗಿ ತಾವು ಕೇವಲ 2 ತಿಂಗಳುಗಳ ಹಿಂದೆಯಷ್ಟೆ ಈ ಸ್ಥಳಕ್ಕೆ ವರ್ಗವಾಗಿ ಬಂದಿರುವುದಾಗಿ ತಿಳಿಸಿ, ಇನ್ನು ಮುಂದೆ ಇಂತಹ ಅಚಾತುರ್ಯಗಳಿಗೆ ಅವಕಾಶ ನೀಡುವುದಿಲ್ಲವೆಂದು ತಿಳಿಸಿರುತ್ತಾರೆ. 2006-07ನೇ ಸಾಲಿನಿಂದ ತಹಲ್‌ವರೆಗಿನ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುತ್ತಿರುವ ಶಿಕ್ಷಕರ ಕಡತವನ್ನು ಅವಗಾಹನೆಗೆ ತರಲು ಹಾಜರಿದ್ದ ಸಿಬ್ಬಂದಿ ವರ್ಗದವರನ್ನು ಕೇಳಲಾಗಿ ಶ್ರೀಮತಿ ಲೋಕೇಶ್ವರಿ, ಪ್ರಥಮ

ದರ್ಜೆ ಗುಮಾಸ್ತರು ಹಾಗೂ ಶ್ರೀ ಅನ್ಬಳಗನ್, ಪ್ರಥಮ ದರ್ಜೆ ಗುಮಾಸ್ತರವರುಗಳು ಕೇವಲ 2 ಅವಧಿಯ ಕಡತಗಳನ್ನು ಮಾತ್ರ ನೀಡಿದ್ದು ಉಳಿದ ಸಾಲಿನ ಕಡತಗಳನ್ನು ಹಾಗೂ ಇತರೆ ಅತಿ ಮುಖ್ಯವಾದ ಟೆಂಡರ್ ಕಡತಗಳನ್ನು ಈ ಹಿಂದೆ ವಿದ್ಯಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ನಿಶ್ಚಲ ಪ್ರಕಾಶಂ ಹಾಗೂ ಶ್ರೀ. ಗೋಪಾಲ್‌ರವರು ಇಟ್ಟುಕೊಂಡಿರುವುದಾಗಿಯೂ, ಕಡತಗಳ ಪ್ರಭಾರವನ್ನು ನೀಡಿರುವುದಿಲ್ಲವೆಂದು ಸಮಿತಿಗೆ ವಿವರಿಸಿರುತ್ತಾರೆ. ಈ ಪೈಕಿ ಶ್ರೀ ನಿಶ್ಚಲ ಪ್ರಕಾಶಂ ರವರು ಈಗಾಗಲೇ ನಿವೃತ್ತಿ ಹೊಂದಿದ್ದು ಶ್ರೀ ಗೋಪಾಲ್‌ರವರು ಈ ಕಛೇರಿಯಿಂದ ವರ್ಗಾವಣೆ ಹೊಂದಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ವಿದ್ಯಾಧಿಕಾರಿಗಳನ್ನು ಕೇಳಲಾಗಿ ಅವರು ಈ ಹಿಂದೆ ಇದ್ದಂತಹ ವಿದ್ಯಾಧಿಕಾರಿಗಳು ಕಡತಗಳ ಪ್ರಭಾರವನ್ನು ನೀಡಿರುವುದಿಲ್ಲವೆಂದು ಈ ಮೇರೆಗೆ ಶ್ರೀ ಗೋಪಾಲ್, ಹಿಂದಿನ ವಿದ್ಯಾಧಿಕಾರಿರವರಿಗೆ ನೋಟೀಸ್ ಸಹ ಜಾರಿ ಮಾಡಿರುವುದಾಗಿ ತಿಳಿಸಿರುವ ಅಂಶಗಳು ಅತಿ ದುರಾದೃಷ್ಟಕರ ಸಂಗತಿಯೆಂದರೆ ತಪ್ಪಾಗಲಾರದು. ಕಛೇರಿ ಕೈಪಿಡಿಯ ರೀತ್ಯಾ ಯಾವುದೇ ಕಡತಗಳನ್ನು ಸಂರಕ್ಷಿಸುವುದು ಹಾಗೂ ವ್ಯವಹರಿಸುವುದು ಕಛೇರಿಯಲ್ಲಿನ ಸಂಬಂಧಪಟ್ಟ ವಿಷಯ ನಿರ್ವಾಹಕರುಗಳ ಆದ್ಯ ಕರ್ತವ್ಯವಾಗಿದ್ದು, ಆದರೆ ಈ ಕಛೇರಿಯಲ್ಲಿನ ಅವ್ಯವಸ್ಥೆಯ ಪ್ರಕಾರ ಎಲ್ಲಾ ಅತಿ ಮುಖ್ಯ ಕಡತಗಳ ವ್ಯವಹರಣೆಯನ್ನು ಪೂರ್ಣ ಪ್ರಮಾಣದಲ್ಲಿ ಹಿಂದಿನ ವಿದ್ಯಾಧಿಕಾರಿಗಳೇ ನಿರ್ವಹಿಸುತ್ತಿರುವುದೇ ಅಲ್ಲದೆ ಕಡತಗಳನ್ನು ಸಹ ಅವರ ಸುಪರ್ದಿಯಲ್ಲಿಯೇ ಇಟ್ಟುಕೊಂಡಿರುವುದು ಹಲವು ವಿಧವಾದ ಅನುಮಾನಗಳಿಗೆ ಆಸ್ಪದ ನೀಡಿದಂತಾಗಿದೆ.

ಕಛೇರಿಯಲ್ಲಿ ಕಳೆದ 7–8 ವರ್ಷಗಳಿಂದ ಕಾರ್ಯನಿರ್ವಹಸುತ್ತಿರುವ ಶ್ರೀಮತಿ ಲೋಕೇಶ್ವರಿ ಹಾಗೂ ಶ್ರೀ ಅನ್ಬಳಗನ್‌ರವರುಗಳು ತಮ್ಮ ಬಳಿ ಯಾವುದೇ ಕಡತಗಳು ಇರುವುದಿಲ್ಲವೆಂದು ಎಲ್ಲಾ ಅತಿಮುಖ್ಯ ಕಡತಗಳನ್ನು ನಿವೃತ್ತಿ ಹೊಂದಿರುವ ಶ್ರೀ ನಿಶ್ಚಲ ಪ್ರಕಾಶಂ ರವರ ಬಳಿ ಇರುವುದಾಗಿಯು ಇನ್ನು ಕೆಲವು ಕಡತಗಳು ಶ್ರೀ ಗೋಪಾಲ್‌ರವರ ಅಲ್ಮೆರದಲ್ಲಿ ಇರುವುದಾಗಿ ತಿಳಿಸಿ ಶ್ರೀ ಗೋಪಾಲ್‌ರವರು ಅಲ್ಮೆರದ ಬೀಗದ ಕೀಯನ್ನು ನೀಡಿರುವುದಿಲ್ಲವೆಂದು ಸಮಿತಿಗೆ ವಿವರಣೆ ನೀಡಿರುತ್ತಾರೆ. ಈ ಬಗೆಗೂ ಸಹ ಸೂಕ್ತ ಸಮಜಾಹಿಷಿ ನೀಡುವಲ್ಲಿ ಹಾಲಿ ಇರುವ ವಿದ್ಯಾಧಿಕಾರಿರವರು ವಿಫಲರಾಗಿರುವುದೇ ಅಲ್ಲದೆ, ತಮ್ಮ ಅಸಹಾಯಕತೆಯನ್ನು ತೋರ್ಪಡಿಸಿಕೊಂಡಿರುತ್ತಾರೆ. ಮೇಲ್ಕಂಡ ಇಬ್ಬರು ವಿಷಯ ನಿರ್ವಾಹಕರು ಕಳೆದ 7–8 ವರ್ಷಗಳಿಂದ ಇದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ಎಲ್ಲಾ ಆಡಳಿತಾತ್ಮಕ ಲೋಪದೋಷಗಳಿಗೆ ಪೂರ್ಣಪ್ರಮಾಣದಲ್ಲಿ ಜವಾಬ್ದಾರರಾಗಿದ್ದು ಕೂಡಲೇ ಇವರಿಬ್ಬರ ಮೇಲೆ ಶಿಸ್ತಿನ ಕ್ರಮ ಜರುಗಿಸುವುದು ಅಗತ್ಯವೆಂದು ಅಭಿಪ್ರಾಯಿಸುತ್ತಾ ಹೆಚ್ಚಿನ ಜವಾಬ್ದಾರಿಯುತವಾದ ಕೆಲಸ

ಕಾರ್ಯವಿಲ್ಲದ ಸ್ಥಳಕ್ಕೆ ಇಬ್ಬರನ್ನು ಕೂಡಲೇ ವರ್ಗಾಹಿಸುವುದು ಅತಿ ಜರೂರು ಎಂದು ಸಮಿತಿಯು ತಿಳಿಸಲಿಚ್ಛಿಸುತ್ತದೆ ಹಾಗೂ ಶ್ರೀ ಗೋಪಾಲ್, ಸಹಾಯಕ ವಿದ್ಯಾಧಿಕಾರಿರವರನ್ನು ಕೂಡಲೇ ಕಛೇರಿಗೆ ಹಾಜರಾಗಲು ದೂರವಾಣಿಯ ಮೂಲಕ ಸೂಚಿಸಲಾಗಿ ಅವರು ಸಮಿತಿಯ ಮುಂದೆ ಬಂದು ತಮ್ಮ ಬಳಿ ಯಾವುದೇ ಕಡತಗಳು ಇರುವುದಿಲ್ಲವೆಂತಲೂ, ತಾವು ಹಿಂದೆ ಉಪಯೋಗಿಸುತ್ತಿದ್ದ ಅಲ್ಮೆರಾದ ಕೀಯನ್ನು ಶ್ರೀ ಸ್ವಾಮಿ, ಆಟದ ಮೈದಾನ ಮೇಲ್ವಿಚಾರಕರವರಿಗೆ ನೀಡಿರುವುದಾಗಿಯು ವಿವರಿಸಿದ್ದು, ಕಛೇರಿಯಲ್ಲಿದ್ದ ಶ್ರೀ ಸ್ವಾಮಿರವರು ಆ ಸಂದರ್ಭದಲ್ಲಿ ಶ್ರೀ. ಗೋಪಾಲ್‌ರವರು ಉಪಯೋಗಿಸುತ್ತಿದ್ದ ಅಲ್ಮೆರಾದ ಕೀಯನ್ನು ನೀಡಿದ್ದು ಈ ಮೊದಲು ಕಛೇರಿಯಲ್ಲಿದ್ದ ಇಬ್ಬರು ವಿಷಯ ನಿರ್ವಾಹಕರುಗಲಾಗಲಿ, ಶ್ರೀ ಸ್ವಾಮಿರವರಾಗಲಿ ಶ್ರೀ ಗೋಪಾಲ್‌ರವರು ತಮಗೆ ಅಲ್ಮೆರಾದ ಕೀಯನ್ನು ನೀಡಿರುವುದಿಲ್ಲ ಎಂದು ಸಮಿತಿಗೆ ತಪ್ಪು ಮಾಹಿತಿ ನೀಡಿರುವ ಕ್ರಮವು ಅತಿ ಘೋರ ಸ್ವರೂಪವಾಗಿದ್ದು, ಕೂಡಲೇ ಮೇಲ್ಕಂಡ ಮೂರು ನೌಕರರುಗಳ ಮೇಲೆ ಕಠಿಣ ಶಿಸ್ತಿನ ಕ್ರಮ ಕೈಗೊಳ್ಳುವುದು ಅತಿ ಅಗತ್ಯವೆಂದು ಸಮಿತಿಯು ಸೂಚಿಸುತ್ತದೆ. ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯವಸ್ಥಾಪಕರು ಹಲವು ವರ್ಷಗಳಿಂದ ಇದೇ ಕಛೇರಿಯಲ್ಲಿದ್ದು ಕಛೇರಿಯ ದೈನಂದಿನ ಕೆಲಸಕಾರ್ಯಗಳನ್ನು ನಿಯಮಾನುಸಾರ ನಿರ್ವಹಿಸಲು ಪೂರ್ಣಪ್ರಮಾಣದಲ್ಲಿ ವಿಫಲರಾಗಿರುವುದೇ ಅಲ್ಲದೆ ಕಛೇರಿಯ ಇಬ್ಬರು ವಿಷಯ ನಿರ್ವಾಹಕರುಗಳೊಂದಿಗೆ ಶಾಮೀಲಾಗಿ ಆಡಳಿತಾತ್ಮಕ ವಿಷಯಗಳ ನಿರ್ವಹಣೆಯಲ್ಲಿ ಪಾಲಿಕೆಯ ಹೆಸರಿಗೆ ಕಳಂಕವನ್ನು ತರುವಲ್ಲಿ ಪ್ರಮುಖ ಪಾತ್ರದಾರಿಗಳಾಗಿರುವುದು ಈ ಕಛೇರಿಯ ಅವ್ಯವಸ್ಥೆಯಿಂದ ಕಂಡು ಬಂದಿರುತ್ತದೆ.

ಕಛೇರಿಯ ತಪಾಸಣೆ ಸಂದರ್ಭದಲ್ಲಿ ಈ ಹಿಂದೆ ಪಾಲಿಕೆಯ ವ್ಯಾಪ್ತಿಯಲ್ಲಿದ್ದಂತಹ ಕ್ರೀಡಾಂಗಣಗಳನ್ನು ನೆಲಬಾಡಿಗೆ ಆಧಾರದ ಮೇಲೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಸಂಘಸಂಸ್ಥೆಗಳಿಗೆ ಹಾಗೂ ಖಾಸಗಿ ವ್ಯಕ್ತಿಗಳಿಗೆ ಬಾಡಿಗೆಗೆ ನೀಡುತ್ತಿದ್ದು, ಈ ರೀತಿಯ ಶುಲ್ಕವನ್ನು ನಗದು ಮೂಲಕ ಸ್ವೀಕರಿಸುತ್ತಿದ್ದು, ಸದರಿ ಮೊತ್ತವನ್ನು ಪಾಲಿಕೆಯ ಖಾತೆಗೆ ಜಮೆ ಮಾಡಿರುವ ಬಗ್ಗೆ ಯಾವುದೆ ಅಗತ್ಯ ದಾಖಲೆಗಳು ಲಭ್ಯವಿಲ್ಲದಿರುವುದು ಸೋಜಿಗದ ಅಂಶವಾಗಿರುತ್ತದೆ. ಈ ಸಂದರ್ಭದಲ್ಲಿಯೂ ಸಹ ವಿದ್ಯಾಧಿಕಾರಿಗಳಾಗಲಿ, ವಿಷಯ ನಿರ್ವಾಹಕರುಗಳಾಗಲಿ, ವ್ಯವಸ್ಥಾಪಕರುಗಳಾಗಲಿ ಸಮರ್ಪಕವಾದ ವಿವರಣೆಯನ್ನು ನೀಡುವಲ್ಲಿ ವಿಫಲರಾಗಿರುವುದೇ ಅಲ್ಲದೇ, ಪಾಲಿಕೆಯ ಹಣ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಈ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಷಯ ನಿರ್ವಾಹಕರುಗಳು ದೈನಂದಿನ ತಮ್ಮ ಕಾರ್ಯ ಚಟುವಟಿಕೆ ಕುರಿತಂತೆ ವಿದ್ಯಾಧಿಕಾರಿಗಳ ಗಮನಕ್ಕೆ ತರುವಲ್ಲಿ ವಿಫಲರಾಗಿರುವುದೇ ಅಲ್ಲದೆ ತಾವು



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ನಿರ್ವಹಿಸ ಬೇಕಾದಂತಹ ಕರ್ತವ್ಯದ ಬಗ್ಗೆ ಯಾವುದೇ ಕಾಳಜಿ ಹೊಂದಿಲ್ಲದೇ ಇರುವುದು ಸಮಿತಿಯ ಗಮನಕ್ಕೆ ಬಂದಿದ್ದು, ಸದರಿಯವರ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ವಿಷಯ ನಿರ್ವಾಹಕರುಗಳಾದ ಶ್ರೀ ಅನ್ಬಳಗನ್ ಮತ್ತು ಶ್ರೀಮತಿ ಲೋಕೇಶ್ವರಿ ರವರುಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಸಮಿತಿಯು ಅಭಿಪ್ರಾಯಿಸುತ್ತದೆ.

ಈ ಕಛೇಯಲ್ಲಿ ಬೋಧಕ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಕಾರ್ಯವನ್ನು ನಿರ್ವಹಿಸದೇ, ಪಠ್ಯ ಪುಸ್ತಕ, ಪೀಠೋಪಕರಣಗಳು, ಷೂಗಳು, ಸಮವಸ್ತ್ರಗಳ ಖರೀದಿಗೆ ಸಂಬಂಧಿಸಿದ ಟೆಂಡರ್ ಕಡತಗಳ ನಿರ್ವಹಣೆ ಹಾಗೂ ಸದರಿ ಕಡತಗಳ ಸಂರಕ್ಷಣೆ ಮಾಡುವುದಷ್ಟೇ ತಮ್ಮ ಕರ್ತವ್ಯವೆಂದು ಭಾವಿಸಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಕೆಲವು ಖರೀದಿಗಳಿಗೆ ಸಂಬಂಧಿಸಿದ ಉದಾ: ಗಣಕಯಂತ್ರ, Audio Visual ಉಪ ಕರಣಗಳ ಟೆಂಡರ್ ಕಡತಗಳ ಆಡಳಿತಾತ್ಮಕ ಲೋಪದೋಷಗಳ ಕುರಿತಂತೆ ಪರಿಶೀಲನೆಗೆ ಒಳಪಡಿಸಲು ಸಂಬಂಧಿಸಿದ ಕಡತಗಳು ಕಛೇರಿಯಲ್ಲಿ ಲಭ್ಯವಿಲ್ಲದೇ ಇರುವುದು ಸಹ ಕೆಲವೊಂದು ಅನುಮಾನಗಳಿಗೆ ಆಸ್ಪದ ನೀಡಿದಂತಾಗಿದೆ. ಮೇಲ್ಕಂಡ ಉಪಕರಣಗಳನ್ನು ಅಗತ್ಯತೆಗೆ ಅನುಸಾರವಾಗಿ ಖರೀದಿಸಿದ ನಂತರ ಸ್ಟಾಕ್ ರಿಜಿಸ್ಟರ್‌ನಲ್ಲಿ ದಾಖಲಿಸಿ ಇಲಾಖಾ ಮುಖ್ಯಸ್ಥರಿಂದ ದೃಢೀಕರಿಸುವುದು ಪಾಲಿಕೆಯ ಕಛೇರಿ ಕೈಪಿಡಿಯ ರೀತ್ಯಾ ಅತ್ಯಗತ್ಯವಾಗಿದ್ದು, ಆದರೆ ಈ ವಿಭಾಗದಲ್ಲಿ ಯಾವುದೇ ಉಪಕರಣಗಳನ್ನು ಗುತ್ತಿಗೆದಾರರಿಂದ ಪಡೆದ ನಂತರ ಕಛೇರಿಯ ಸ್ಟಾಕ್ ರಿಜಿಸ್ಟರ್‌ನಲ್ಲಿ ನಮೂದಿಸುವುದು ತಮಗೆ ತಿಳಿದಿಲ್ಲವೆಂದು ಮೊದಲಿನಿಂದಲೂ ಹಿಂದೆ ಇದ್ದಂತಹ ವಿದ್ಯಾಧಿಕಾರಿಗಳೇ ಮೇಲ್ಕಂಡ ಉಪಕರಣಗಳನ್ನು ಗುತ್ತಿಗೆದಾರರಿಂದ ಪಡೆದು ಶಾಲಾ ಕಾಲೇಜುಗಳಿಗೆ ವಿತರಿಸುತ್ತಿದ್ದರೆಂದು ಹಾಜರಿದ್ದ ವಿಷಯ ನಿರ್ವಾಹಕರುಗಳಾದ ಶ್ರೀಮತಿ ಲೋಕೇಶ್ವರಿ ಮತ್ತು ಶ್ರೀ ಅನ್ಬಳಗನ್‌ರವರು ತಿಳಿಸಿದ್ದು ಇದು ಈ ಕಛೇರಿಯಲ್ಲಿನ ಅವ್ಯವಸ್ಥೆಯನ್ನು ಸಾರಿ ಹೇಳುತ್ತಿದ್ದು, ಕೋಟ್ಯಾಂತರ ರೂಗಳ ಸಾಮಗ್ರಿಗಳ ವಿತರಣೆ ಹಾಗೂ ಹಳೆಯ ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳ ಸಧ್ಯದ ಪರಿಸ್ಥಿತಿಯ ಬಗ್ಗೆ ಯಾರಿಗೂ ಸಹ ಕಾಳಜಿ ಇಲ್ಲದಿರುವುದು ಈ ಕಛೇರಿಯ ಅತಿ ಗಂಭೀರ ಸ್ವರೂಪದ ಕರ್ತವ್ಯ ಲೋಪವನ್ನು ಎತ್ತಿ ತೋರಿಸುತ್ತದೆ. ಈ ಕಛೇರಿಯಲ್ಲಿ ಯಾವೊಬ್ಬ ಸಿಬ್ಬಂದಿಗಳಿಗೂ ಸಹ ತಮ್ಮ ತಮ್ಮ ಕಾರ್ಯಭಾರದ ಕುರಿತಂತೆ (work allocation) ಸ್ಪಷ್ಟ ಆದೇಶವಿಲ್ಲದೇ ಇರುವುದರಿಂದ ಅವರು ಮನಸೋ ಇಚ್ಛೆ ವರ್ತಿಸುತ್ತಿದ್ದು, ಇವರುಗಳಿಂದಾಗಿ ಪಾಲಿಕೆಗೆ ಕಳಂಕ ಉಂಟಾಗುತ್ತಿರುವುದು ಮೇಲ್ನೋಟಕ್ಕೆ ಸಾಭೀತಾಗಿರುತ್ತದೆ. ಈ ಇಲಾಖೆಯಲ್ಲಿ ಬೋಧಕ ಸಿಬ್ಬಂದಿಗಳು ಹೆಚ್ಚಾಗಿ ಬೋಧಕೇತರ ಕಾರ್ಯಚಟುವಟಿಕೆಯಲ್ಲಿ ಭಾಗಿಯಾಗಿದ್ದು, ತಾವುಗಳು ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಕಾರ್ಯವನ್ನು ನಿರ್ವಹಿಸುವುದನ್ನು ಬಿಟ್ಟು ಉಪಕರಣಗಳ ಖರೀದಿಗೆ ಸಂಬಂಧಿಸಿದಂತೆ

ಟೆಂಡರ್ ಪ್ರಕ್ರಿಯೆಯ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿವಹಿಸಿ ಗುಮಾಸ್ಥರುಗಳು ನಿರ್ವಹಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದ್ದು, ಕೂಡಲೇ ಈ ಇಲಾಖೆಯಲ್ಲಿ ಬೋಧಕ ಸಿಬ್ಬಂದಿಗಳನ್ನು ಶಾಲಾ ಕಾಲೇಜುಗಳಲ್ಲಿ ಬೋದಕ ಕಾರ್ಯಗಳನ್ನು ನಿರ್ವಹಿಸುವಂತೆ ಕಟ್ಟುನಿಟ್ಟಿನ ಆದೇಶ ಜಾರಿ ಮಾಡಲು ಸಮಿತಿಯು ಆದೇಶಿಸಿರುತ್ತದೆ. ಈ ರೀತಿ ಕ್ರಮ ಕೈಗೊಂಡ ಪಕ್ಷದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರುಗಳ ನೇಮಕವನ್ನು ನಿಯಂತ್ರಿಸಬಹುದಾಗಿದ್ದು, ಇದರಿಂದ ಪಾಲಿಕೆಯ ತೆರಿಗೆದಾರರು ಪಾವತಿಸುವ ತೆರಿಗೆ ಹಣವು ಪೋಲಾಗುವುದನ್ನು ತಡೆಗಟ್ಟುವುದೇ ಅಲ್ಲದೆ ಬಡ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಬಹುದೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

2009–10ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಅವಲೋಕಿಸಿದಾಗ 1998–99ನೇ ಸಾಲಿನಿಂದ 2008–09ನೇ ಸಾಲಿನ ವರೆವಿಗೆ ಆಕ್ಷೇಪಣಾ ಮೊಬಲಗು ಹಾಗೂ ವಸೂಲಾತಿ ಮೊತ್ತಗಳು ತಿರುವಳಿಯಾಗದೆ ಬಾಕಿ ಇರುವ ವಿವರದಂತೆ ಸುಮಾರು 12,42,95,976/–ರೂಗಳ ಆಕ್ಷೇಪಣಾ ಮೊತ್ತವಿದ್ದು, ಈ ಪೈಕಿ ಕೇವಲ ರೂ 36,05,985/–ಗಳನ್ನು ವಸೂಲಾತಿಯಾಗಿದ್ದು, ಬೃಹದಾಕಾರವಾದ ಉಳಿಕೆ ಮೊತ್ತದ ವಸೂಲಿ ಮಾಡುವ ಕ್ರಮದ ಬಗ್ಗೆ ಯಾವೊಬ್ಬ ವಿದ್ಯಾಧಿಕಾರಿಗಳು ಜವಾಬ್ದಾರಿ ವಹಿಸದೇ ಇದ್ದು, ಈ ರೀತಿಯ ಆರ್ಥಿಕ ನಷ್ಟಕ್ಕೆ ಅವರುಗಳೇ ಹೊಣೆಗಾರರಾಗಿರುವುದರಿಂದ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಮೇಲೂ ಕಠಿಣ ಕ್ರಮ ಜರುಗಿಸಲು ಸಮಿತಿಯು ಅಭಿಪ್ರಾಯಿಸುತ್ತದೆ. ಅತಿ ಮುಖ್ಯವಾಗಿ 2009–10ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಈ ಕಛೇರಿಯಲ್ಲಿ ನಡೆದಂತಹ ಎಲ್ಲಾ ಟೆಂಡರ್ ಪ್ರಕ್ರಿಯೆಯಲ್ಲಿಯೂ ಸಹ ಆಡಳಿತಾತ್ಮಕ ಲೋಪದೋಷಗಳು ಉಂಟಾಗಿರುವುದಾಗಿ ವಿವರಿಸಿದ್ದು, ತಪಾಸಣೆಯ ಸಂದರ್ಭದಲ್ಲಿ ಸದರಿ ಕಛೇರಿಯಿಂದ ವಶ ಪಡಿಸಿಕೊಂಡ ಕಡತಗಳ ಪೈಕಿ ಕೆಲವೊಂದು ಕಡತಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅತಿ ಗಂಭೀರ ಸ್ವರೂಪದ ಆಡಳಿತಾತ್ಮಕ ಲೋಪದೋಷಗಳು ಕಂಡುಬಂದಿದ್ದು, ಅವುಗಳ ಸಂಕ್ಷಿಪ್ತ ವಿವರಣೆಯು ಈ ಕೆಳಕಂಡಂತಿರುತ್ತದೆ.

***I-ಗುತ್ತಿಗೆ ಆಧಾರದ ಮೇಲೆ ಶಿಕ್ಷಕರುಗಳನ್ನು ನೇಮಕಾತಿ ಮಾಡುವ ಬಗ್ಗೆ:***

*2011–12ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರುಗಳನ್ನು ನೇಮಕ ಮಾಡಿಕೊಂಡಿರುವ ಪ್ರಕ್ರಿಯೆಯಲ್ಲಿ ಉಂಟಾಗಿರುವ ಆಡಳಿತಾತ್ಮಕ ಲೋಪದೋಷಗಳು ಈ ಕಂಡಂತಿರುತ್ತದೆ:–*

- ಸದರಿ ಪ್ರಕ್ರಿಯೆಯ ಕಡತದಲ್ಲಿ ಕಡತ ನಿರ್ವಹಣೆ ಮಾಡುವ ಕುರಿತಂತೆ ನಿರ್ವಹಿಸಬೇಕಾದ ಕನಿಷ್ಟ ಕಾರ್ಯವಿಧಾನಗಳನ್ನು ಅನುಸರಿಸಿರುವುದಿಲ್ಲ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

* ಕಛೇರಿಯ ಯಾವೊಬ್ಬ ವಿಷಯ ನಿರ್ವಾಹಕರುಗಳು, ವ್ಯವಸ್ಥಾಪಕರುಗಳು ಕಡತವನ್ನು ಮಂಡಿಸದೆ ನೇರವಾಗಿ ಅಧಿಕಾರಿಗಳ ಮಟ್ಟದಲ್ಲೇ ವ್ಯವಹರಣೆಯಾಗಿದ್ದು ಹಾಗೂ ಕಡತ ವ್ಯವಹರಣೆ ಬಗ್ಗೆ ಯಾವೊಂದು ಕಛೇರಿಗಳಲ್ಲಿಯೂ ಸಹ ಸ್ವೀಕೃತಿ ಮೊಹರನ್ನು ಹಾಕದೆ ಇರುವುದು ಕಂಡುಬಂದಿರುತ್ತದೆ.

* 2011–12ನೇ ಸಾಲಿನಲ್ಲಿ ಮಾತ್ರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ನಡೆಸಿದ್ದು, ಕರ್ನಾಟಕ ಪಾರದರ್ಶಕ ಕಾಯ್ದೆಯನ್ವಯ ಅನುಸರಿಸಬೇಕಾದ ವಿಧಾನಗಳನ್ನು ಅನುಸರಿಸದೇ ನಿಯಮಗಳ ಉಲ್ಲಂಘನೆ ಮಾಡಿರುವುದು ಕಡತದಲ್ಲಿ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

* ಟೆಂಡರ್ ಪ್ರಕ್ರಿಯೆಯಲ್ಲಿ ಮೆ॥ ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ ಅಂಡ್ ಸರ್ವೀಸಸ್‌ರವರು ಏಕೈಕ ಟೆಂಡರ್ ಬಿಡ್‌ದಾರರಾಗಿರುತ್ತಾರೆ, ಆದರೆ ಆಯುಕ್ತರ ಸುತ್ತೋಲೆ ಹಾಗೂ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆಯಲ್ಲಿ ಒಬ್ಬರೆ ಬಿಡ್‌ದಾರರು ಪಾಲ್ಗೊಂಡ ಪಕ್ಷದಲ್ಲಿ, ಮರುಟೆಂಡರ್ ಕರೆಯಬೇಕಾಗಿದ್ದು, ಈ ಪ್ರಕ್ರಿಯೆಯನ್ನು ನಡೆಸದೇ ಏಕೈಕ ಬಿಡ್‌ದಾರರಿಗೆ ಟೆಂಡರ್ ನೀಡಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದ್ದು ಹಾಗೂ ನಿಯಮಬಾಹಿರ ಕ್ರಮವೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

* ಟೆಂಡರ್ ಪ್ರಕ್ರಿಯೆಯ ಕಡತಗಳಲ್ಲಿ ಇ.ಎಂ.ಡಿ ಮೊತ್ತವನ್ನು ಪಾಲಿಕೆಗೆ ಜಮೆಮಾಡಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ಸರ್ಕಾರದ ವಿವಿಧ ಇಲಾಖೆಗಳು ನೀಡಿರುವ ಯಾವುದೇ ಮೂಲ ಪ್ರಮಾಣ ಪತ್ರಗಳು ಇರುವುದಿಲ್ಲ.

* ಜಂಟಿ ನಿರ್ದೇಶಕರು(ಅಂಕಿ–ಅಂಶ)ರವರೂ ಸಹ ಸದರಿ ಸಂಸ್ಥೆಯಿಂದ ನೇರವಾಗಿ ಡಿ.ಇ.ಓಗಳನ್ನು ಪಡೆದಿರುವುದಾಗಿ ಪತ್ರ ನೀಡಿರುತ್ತಾರೆ. ಈ ಬಗ್ಗೆ ಆಯುಕ್ತರಿಂದ ಅನುಮತಿ ಪಡೆಯಲಾಗಿರುತ್ತದೆಯೆ. ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಹೊಂದಿರುವ ಶಿಕ್ಷಕರು ಅಗತ್ಯ ವಿದ್ಯಾರ್ಹತೆ ಹೊಂದಿರುವರೆ ಎಂಬ ಬಗ್ಗೆ ಯಾವೊಬ್ಬ ಅಧಿಕಾರಿಯು ದೃಢೀಕರಣ ಮಾಡದೇ ವೇತನ ಪಾವತಿಸಿರುವುದು (ಮಾಸಿಕ ಸುಮಾರು 48 ಲಕ್ಷಗಳು) ಕಂಡು ಬಂದಿರುತ್ತದೆ.

* ಕೆಲವು ಶಿಕ್ಷಕರು 2 ಸ್ಥಳಗಳಲ್ಲಿ ವೇತನ ಪಡೆಯುತ್ತಿರುವುದು ಕಂಡು ಬಂದಿರುತ್ತದೆ. ಇ.ಎಸ್.ಐ ಸಂಸ್ಥೆ ನೀಡಿರುವ ಪ್ರಪತ್ರದಲ್ಲಿ ಕೇವಲ 22 ಮಂದಿ ನೌಕರರಿಗೆ ಮಾತ್ರ ವಿಮೆ ಪಾವತಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಸಾರ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕಾಗಿದ್ದು ಈ ಬಗ್ಗೆ ಗಮನ ಹರಿಸಿರುವುದಿಲ್ಲ.

* 2006–07ನೇ ಸಾಲಿನಿಂದಲೂ ಹೊರಗುತ್ತಿಗೆ ನೇಮಕಾತಿಯನ್ನು ಮೆ॥ ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ ಅಂಡ್ ಸರ್ವೀಸಸ್‌ರವರಿಗೆ ನಿರಂತರವಾಗಿ ವಹಿಸುತ್ತಿದ್ದು ಯಾವುದೇ ಟೆಂಡರ್ ಪ್ರಕ್ರಿಯೆ ನಡೆಸದೇ ಈ ರೀತಿ ಒಂದೇ ಸಂಸ್ಥೆರವರಿಗೆ ವಹಿಸಿಕೊಡುತ್ತಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

**II:** ***ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಅಧ್ಯಯನ ಪಠ್ಯ ಪುಸ್ತಕಗಳನ್ನು ಖರೀದಿ ಕುರಿತಂತೆ (ಕಡತದ ಸಂಖ್ಯೆ:ವಿದ್ಯಾ(1)ಪಿಆರ್/61/2012-13);-***

ಪದವಿ ಪೂರ್ವ ಕಾಲೇಜುಗಳಿಗೆ ಉತ್ತಮ ಗುಣಮಟ್ಟದ ಅಧ್ಯಯನ ಪುಸ್ತಕಗಳನ್ನು ಖರೀದಿಸಿ ವಿತರಿಸುವ ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವೊಂದು ಆಡಳಿತಾತ್ಮಕ ಲೋಪದೋಷಗಳು ಕಂಡು ಬಂದಿರುತ್ತದೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ ಒಬ್ಬರೆ ಬಿಡ್‌ದಾರರು ಭಾಗವಹಿಸಿದ್ದರೂ ಮರು ಟೆಂಡರ್ ಕರೆಯದೆ ಭಾಗವಹಿಸಿರುವ ಏಕೈಕ ಬಿಡ್‌ದಾರರಿಗೆ ಟೆಂಡರ್‌ಗೆ ಅನುಮೋದನೆ ನೀಡಿರುವುದು ದುರದೃಷ್ಟಕರ ಅಂಶವಾಗಿರುತ್ತದೆ. ಸುಮಾರು 49,400 ಸಂಖ್ಯೆಯಷ್ಟು ಪುಸ್ತಕಗಳ ಖರೀದಿ ಪ್ರಕ್ರಿಯೆಯಲ್ಲಿ ಒಂದೇ ಭಾರಿ ಟೆಂಡರ್ ಕರೆದು ಅನುಮೋದನೆ ನೀಡುವ ಅಗತ್ಯತೆಯ ಬಗ್ಗೆ ಕೆಲವೊಂದು ಸಂಶಯಗಳಿಗೆ ಅನುಮಾನ ಉಂಟಾಗಿರುತ್ತದೆ ಹಾಗೂ ಅತಿ ಮುಖ್ಯವಾಗಿ ಟೆಂಡರ್ ಪರಿಶೀಲನಾ ಸಮಿತಿಯಲ್ಲಿ ಸಹಾಯಕ ನಿಯಂತ್ರಕರು(ಹಣಕಾಸು) ಹಾಗೂ ಕಾನೂನು ಸಲಹೆಗಾರರು ಸದಸ್ಯರಾಗಿರಬೇಕಾಗಿರುವುದು ಅತ್ಯವಶ್ಯಕವಾಗಿದ್ದಾಗ್ಯೂ ಸಹ ಈ ಪ್ರಕ್ರಿಯೆಯಲ್ಲಿ ಅವರಿಬ್ಬರು ಭಾಗವಹಿಸದೆ ಇರುವುದು ಅತಿ ಮುಖ್ಯ ಲೋಪವೆಂಬುದನ್ನು ಕಾಣಬಹುದಾಗಿದೆ. ಅತಿ ಮುಖ್ಯವಾಗಿ ಪ್ರಕಾಶಕರಿಂದ ಪಡೆದ ಪುಸ್ತಕಗಳನ್ನು ಸ್ಟಾಕ್ ರಿಜಿಸ್ಟರ್‌ನಲ್ಲಿ ದಾಖಲಿಸಿ ನಂತರ ಪದವಿ ಪೂರ್ವ ಕಾಲೇಜ್‌ಗಳಿಗೆ ವಿತರಿಸಬೇಕಾಗಿರುತ್ತದೆ. ಆದರೆ 49400 ಪುಸ್ತಕಗಳನ್ನು ಸ್ಟಾಕ್ ರಿಜಿಸ್ಟರ್‌ಗೆ ದಾಖಲಿಸದೆ ಇರುವುದು ಈ ಒಂದು ಅವ್ಯವಹಾರಕ್ಕೆ ಸಾಕ್ಷಿಭೂತವಾಗಿರುತ್ತದೆ.

**III:** ***2011-12ನೇ ಸಾಲಿಗೆ ಪಾಲಿಕೆಯ ಪದವಿ ಪೂರ್ವ ಕಾಲೇಜುಗಳಿಗೆ ಅಧ್ಯಯನ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುವ ಬಗ್ಗೆ. (ಕಡತದ ಸಂಖ್ಯೆ: ವಿದ್ಯಾ(2)ಪಿಆರ್/15/2012-13);-***

- ಮಾನ್ಯ ಆಯುಕ್ತರು ಆದೇಶಿಸಿರುವ ಮೂಲ ಟಿಪ್ಪಣಿ ಕಡತದಲ್ಲಿ ಲಭ್ಯವಿರುವುದಿಲ್ಲ. ನಕಲು ಪ್ರತಿಯನ್ನು ಕಡತದಲ್ಲಿ ಲಗತ್ತಿಸಿದೆ.
- ಕಡತದಲ್ಲಿನ ಟಿಪ್ಪಣಿ ಹಾಳೆಯನ್ನು ಪರಿಶೀಲಿಸಿದಾಗ ವಿದ್ಯಾಧಿಕಾರಿಗಳು ಎಲ್ಲಿಯೂ ಸಹ ದಿನಾಂಕ ನಮೂದಿಸಿರುವುದಿಲ್ಲ ಹಾಗೂ ಪ್ರತಿ ಕಂಡಿಕೆಯಾದ ನಂತರ ಅಪರ ಆಯುಕ್ತರು(ಆಸ್ತಿಗಳು)ರವರಿಗೆ ವಿದ್ಯಾಧಿಕಾರಿಗಳು ಅನುಮೋದನೆಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಆದರೆ ಕಡತದಲ್ಲಿ ಎಲ್ಲಿಯೂ ಸಹ ಅಪರ ಆಯುಕ್ತರು(ಆಸ್ತಿಗಳು)ರವರು ವಿದ್ಯಾಧಿಕಾರಿಗಳ ಪ್ರಸ್ತಾವನೆಯನ್ನು ಅನುಮೋದಿಸಿರುವುದಿಲ್ಲ ಹಾಗೂ ಟಿಪ್ಪಣಿ ಹಾಳೆಗಳಲ್ಲಿ ಮಾಹಿತಿಗಳು ಅಸ್ಪಷ್ಟವಾಗಿದ್ದು ವಿದ್ಯಾಧಿಕಾರಿಗಳೆ ಪ್ರಸ್ತಾವನೆಯನ್ನು ಮಂಡಿಸಿ ವಿದ್ಯಾಧಿಕಾರಿಗಳೇ ಅನುಮೋದಿಸಿಕೊಂಡಿರುತ್ತಾರೆ ಕಂಡಿಕೆ ಸಂಖ್ಯೆಗಳನ್ನು ಪ್ರಸ್ತಾವನೆಗಳಲ್ಲಿ ಖಾಲಿ ಬಿಟ್ಟಿದ್ದು ಇದು ಟಿಪ್ಪಣಿಯ ಎಲ್ಲಾ ಪ್ರಸ್ತಾವನೆಯನ್ನು ಒಂದೇ ಬಾರಿ ತಯಾರಿಸಿರುವುದು ಸ್ಪಷ್ಟವಾಗಿರುತ್ತದೆ.
- ಈ ಪ್ರಕರಣದಲ್ಲಿಯೂ ಸಹ ಒಬ್ಬರೇ ಬಿಡ್‌ದಾರರಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಒಬ್ಬರೇ ಬಿಡ್‌ದಾರರಿದ್ದಲ್ಲಿ ಮರು ಟೆಂಡರ್ ಮಾಡಬೇಕಾಗಿದ್ದು, ಇದನ್ನು ಪಾಲಿಸದೆ ನಿಯಮಗಳಿಗೆ ವಿರುದ್ಧವಾಗಿ ಭಾಗವಹಿಸಿರುವ ಏಕೈಕ ಬಿಡ್‌ದಾರರಿಗೆ ಟೆಂಡರ್ ನೀಡಿರುವುದು ಕಾನೂನಿಗೆ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿರುದ್ಧವಾಗಿದ್ದು, ಈ ಬಗ್ಗೆ ವಿವರಣೆ ನೀಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದು, ಈ ಬಗ್ಗೆ ಹೆಚ್ಚಿನ ತನಿಖೆ ಅಗತ್ಯವಿದೆ ಎಂದು ಸಮಿತಿಯು ಅಭಿಪ್ರಾಯಿಸಿದೆ.

- ಇ.ಎಂ.ಡಿ ಮೊತ್ತವನ್ನು ಇ-ಪ್ರೊಕ್ಯೂರ್‌ಮೆಂಟ್‌ನಿಂದ ವಾಪಸ್ಸು ಪಡೆಯುವ ಬಗ್ಗೆ ಕಡತದಲ್ಲಿ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ.
- 2006-07ನೇ ಸಾಲಿನಿಂದ ತಹಲ್‌ವರೆವಿಗೂ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುವ ಗುತ್ತಿಗೆಯನ್ನು ಪ್ರತಿ ವರ್ಷವು ಮೆ॥ ಪ್ರಕಾಶ್ ಸಾಹಿತ್ಯ ಬೆಂಗಳೂರು ರವರಿಗೆ ನೀಡುತ್ತಿರುವುದು ಸಹ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿರುತ್ತದೆ.
- ಟೆಂಡರ್ ಸಮಿತಿಯಲ್ಲಿ ಕಾನೂನು ವಿಭಾಗದ ಹಾಗೂ ಲೆಕ್ಕಪತ್ರ ವಿಭಾಗದ ಯಾವೊಬ್ಬ ಅಧಿಕಾರಿಗಳು ಇಲ್ಲದೇ ಇದ್ದು, ಕೇವಲ ವಿದ್ಯಾ ಇಲಾಖೆಯ ಅಧಿಕಾರಿಗಳು ಸಮಿತಿಯಲ್ಲಿ ಇರುವುದು ಸಹ ಹಲವು ಅನುಮಾನಗಳಿಗೆ ಎಡೆಮಾಡಿಕೊಡತ್ತದೆ.
- 1 ಲಕ್ಷಕ್ಕೂ ಮೀರಿದ ಮೊತ್ತವನ್ನು ಡಿ.ಸಿ ಬಿಲ್ ಮುಖಾಂತರ ಪಾವತಿ ಮಾಡಲು ನಿಯಮಾವಳಿಗಳ ರೀತ್ಯಾ ಅವಕಾಶವಿದೆಯೇ? ಉದಾ: ಸದರಿ ಪ್ರಕರಣದಲ್ಲಿ ರೂ.24,12,490/-ಗಳನ್ನು ಡಿ.ಸಿ ಬಿಲ್ ಮುಖಾಂತರ ಪಾವತಿಸಲಾಗಿದೆ.
- ಸರಬರಾಜು ಆದೇಶವನ್ನು ದಿನಾಂಕ:08.07.2011ರಂದು ನೀಡಲಾಗಿದ್ದು, ಆದರೆ ಗುತ್ತಿಗೆದಾರರೊಂದಿಗೆ ಒಡಂಬಡಿಕೆ ಪತ್ರದ ದಿನಾಂಕ:11.07.2011 ಅಂದರೆ ಸರಬರಾಜು ಆದೇಶ ನೀಡಿದ ತರುವಾಯ ಒಡಂಬಡಿಕೆ ಮಾಡಿಕೊಂಡಿರುವ ಕ್ರಮವು ಆಡಳಿತಾತ್ಮಕ ಲೋಪದೋಷವಾಗಿರುತ್ತದೆ.
- ಪ್ರಕಾಶ ಸಾಹಿತ್ಯರವರು ಸಲ್ಲಿಸಿರುವ ಬಿಲ್‌ಗಳಲ್ಲಿ ಕೆ.ಎಸ್.ಟಿ ಮತ್ತು ಸಿ.ಎಸ್.ಟಿ ಸಂಖ್ಯೆಗಳು ಇರುವುದಿಲ್ಲ, ಇಂತಹ ಲೋಪದೋಷವುಳ್ಳ ಬಿಲ್‌ಗಳಿಗೆ ಯಾವ ರೀತಿ ಚೆಕ್ ಪಾವತಿಸಲಾಗಿದೆ ಎಂಬ ಬಗ್ಗೆ ವಿವರಣೆ ಅಗತ್ಯ.
- ಇಷ್ಟೆಲ್ಲಾ ಆಡಳಿತಾತ್ಮಕ ನ್ಯೂನತೆಗಳು ಇದ್ದರೂ ಸಹ ಇದ್ಯಾವುದನ್ನು ಪರಿಶೀಲಿಸದೇ ಎಲ್ಲಾ ಅಧಿಕಾರಿಗಳು ಅನುಮೋದಿಸಿ ಬಿಲ್ ಪಾವತಿಸಿರುವ ಕ್ರಮವು ನಿಯಮಬಾಹಿರವಾಗಿರುತ್ತದೆ. ಆದ್ದರಿಂದ ಈ ಮೇಲ್ಕಂಡ ಪ್ರಕರಣದ ಆಡಳಿತಾತ್ಮಕ ಲೋಪದೋಷಗಳ ಬಗ್ಗೆ ಸೂಕ್ತ ತನಿಖೆ ಅತ್ಯಗತ್ಯ ಎಂದು ಸಮಿತಿಯು ಅಭಿಪ್ರಾಯಿಸುತ್ತದೆ.

**IV:*2010-11ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಟದ ಮೈದಾನ/ಉದ್ಯಾನವನಗಳಲ್ಲಿ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕಾರ್ಯದ ಟೆಂಡರ್ ಕಡತ. (ಕಡತದ ಸಂಖ್ಯೆ: ಎಸ್.ಪಿ.ಪಿ.ಆರ್/28/2010-11);-***

- ಟೆಂಡರ್‌ದಾರರಾದ ಮೆ॥ ವಿನ್ಯಾಸ್, ಪ್ಲೇ ಸಿಸ್ಟಮ್‌ರವರು ನೀಡಿರುವ ಯಾವುದೇ ದಾಖಲಾತಿಗಳು ಸ್ಪಷ್ಟವಾಗಿರುವುದಿಲ್ಲ.
- ಅಫಿಡವಿಟ್‌ಗೆ ಸಹಿ ಮಾಡಿರುವುದಿಲ್ಲ.

- ದಿನಾಂಕ:11.02.2011ರಂದು ನಡೆದ ತಾಂತ್ರಿಕ ಬಿಡ್ ತೆರೆಯುವ ಸಂದರ್ಭದಲ್ಲಿ ದಾಖಲಾತಿಯಲ್ಲಿ ಒಂದೆಡೆ ಉಪ ಕಾನೂನು ಅಧಿಕಾರಿಗಳು ತಮ್ಮ ಸಹಿಯೊಂದಿಗೆ ದಿನಾಂಕವನ್ನು 12.02.2012ಎಂದು ನಮೂದಿಸಿರುತ್ತಾರೆ.
- ಟೆಂಡರ್ ಅನುಮೋದನಾ ಸಮಿತಿಯ ಸಭೆಯ ನಡವಳಿಯಲ್ಲಿ ಉಪ ಕಾನೂನು ಅಧಿಕಾರಿ ಹಾಗೂ ಅಧೀಕ್ಷಕ ಲೆಕ್ಕ ಪತ್ರರವರುಗಳು ಸಹಿ ಮಾಡಿರುವುದಿಲ್ಲ ಇದು ಅತಿ ಮುಖ್ಯ ಲೋಪವಾಗಿರುತ್ತದೆ.
- ಫೈನಾನ್ಷಿಯಲ್ ಬಿಡ್ ಬಗೆಗಿನ ಪರಿಶೀಲನೆ ನಡವಳಿ ಕಡತದಲ್ಲಿ ಇರುವುದಿಲ್ಲ.
- ಒಡಂಬಡಿಕೆ ಪತ್ರದಲ್ಲಿ (ಸ್ಟಾಂಪ್ ಪೇಪರ್) ಕೇವಲ ಕೊನೆಯ ಹಾಳೆಯಲ್ಲಿ ಮಾತ್ರ ಸಹಿ ಇದ್ದು ಮದ್ಯದ ಹಾಳೆಗಳಲ್ಲಿ ಸಹಿ ಇರುವುದಿಲ್ಲ.
- ಡಿ.ಸಿ. ಬಿಲ್ –ಹೆಚ್.ಆರ್.ಎಂ.ಎಸ್ ಬಿಲ್‌ಗಳಲ್ಲಿ ಹಣ ತೆಗೆಯುವ ಅಧಿಕಾರಿ ಹಾಗೂ ಮೇಲುರುಜು ಹಾಕುವ ಅಧಿಕಾರಿಯ ಸಹಿ ಇರುವುದಿಲ್ಲ.
- ವಿದ್ಯಾಧಿಕಾರಿಗಳು ತಮ್ಮ ಕಛೇರಿಯ ಟಿಪ್ಪಣಿಯಲ್ಲಿ ವಿಷಯ ನಿರ್ವಾಹಕರ, ವ್ಯವಸ್ಥಾಪಕರ ಸಹಿ ಇಲ್ಲದೆ ಇರುವುದೇ ಅಲ್ಲದೆ ವಿದ್ಯಾಧಿಕಾರಿಗಳೇ ಈ ಕಡತವನ್ನು ನೇರವಾಗಿ ಅಪರ ಆಯುಕ್ತರು(ಕಲ್ಯಾಣ) ಹಾಗೂ ಇನ್ನಿತರ ಹಿರಿಯ ಅಧಿಕಾರಿಗಳ ಬಳಿ ವ್ಯವಹರಿಸಿದ್ದು, ಸದರಿ ಕಛೇರಿಗಳಲ್ಲಿ ಈ ಕಡತದ ವ್ಯವಹರಣೆಗೆ ಸಂಬಂಧಿಸಿದಂತೆ ಅಧಿಕೃತ ಮೊಹರಾಗಲಿ ಕಛೇರಿಯ ಸಂಖ್ಯೆಯಾಗಲಿ ದಾಖಲಾಗದೆ ಇರುವುದು ಹಲವು ಅನುಮಾನಗಳಿಗೆ ಆಸ್ಪದ ನೀಡಿದಂತಾಗಿದೆ.
- ಡಿ.ಸಿ ಬಿಲ್ ಮುಖಾಂತರ 1 ಲಕ್ಷಕ್ಕೂ ಮೀರಿದ ವೆಚ್ಚದ ಬಾಬ್ತನ್ನು ಪಾವತಿಸಲು ನಿಯಮಗಳಲ್ಲಿ ಅವಕಾಶವಿದೆಯೆ (ಉದಾ: ಮೆ॥ ಟಾಯ್ಸ್ ಅಂಡ್ ಸ್ಪೋರ್ಟ್ಸ್‌ರವರಿಗೆ ಡಿ.ಸಿ ಬಿಲ್ ಮುಖಾಂತರ ರೂ 29,24,000ಗಳನ್ನು ಪಾವತಿಸಿರುವ ಕುರಿತು)

**<u>V: *2010–11ನೇ ಸಾಲಿಗೆ ವಿವಿಧ ಶಾಲಾ ಕಾಲೇಜುಗಳಿಗೆ ಲೇಖನಾ ಸಾಮಗ್ರಿಗಳು ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿ ಕುರಿತಂತೆ ಬಿಲ್ ಪಾವತಿಸಿರುವ ಹಲವಾರು ಕಡತಗಳಲ್ಲಿನ ಆಡಳಿತಾತ್ಮಕ ಲೋಪದೋಷಗಳು;–*</u>**

1. ಸ್ಟಾಕ್ ಪುಸ್ತಕವನ್ನು ಸದರಿ ಕಛೇರಿಗಳಲ್ಲಿ ನಿರ್ವಹಿಸಲಾಗುತ್ತಿಲ್ಲ. ಆದ್ದರಿಂದ ಪ್ರತಿವರ್ಷವೂ ಅನುದಾನದಲ್ಲಿ ಮೀಸಲಿರಿಸಿರುವ ಹಣವನ್ನು ಉಪಯೋಗಿಸಿಕೊಂಡು ಪೀಠೋಪಕರಣಗಳು, ಆಟಿಕೆ ಸಾಮಗ್ರಿಗಳು ಹಾಗೂ ಇತರೆ ಸಾಮಗ್ರಿಗಳನ್ನು ಕೋಟ್ಯಾಂತರ ರೂಗಳನ್ನು ವೆಚ್ಚಮಾಡಿ ಖರೀದಿಸಲಾಗುತ್ತಿದ್ದು, ಹಳೆಯ ಸಾಮಗ್ರಿಗಳು ಏನಾದವು ಎಂಬುದರ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಒಮ್ಮೆ ಖರೀದಿಸಿದ ಮೇಲೆ ಅವುಗಳನ್ನು ಸರಬರಾಜು ಮಾಡಿರುವ ಬಗ್ಗೆ ದೃಡೀಕರಿಸಿ ಹಾಗೂ ವಿವಿಧ ಶಾಲೆಗಳಿಗೆ ವಿತರಿಸಿರುವ ಬಗ್ಗೆ ಸ್ವೀಕೃತಿ ಪಡೆದು Issue Register ನಲ್ಲಿ ಕಡ್ಡಾಯವಾಗಿ ನಮೂದಿಸಬೇಕಾಗಿದ್ದು, ಯಾವುದೇ ವಹಿಗಳು ತಪಾಸಣೆ ವೇಳೆ ಲಭ್ಯವಿಲ್ಲದೇ ಇದ್ದು ಅಧಿಕಾರಿಗಳ ನಡೆಯು ಅನುಮಾನಾಸ್ಪದವಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

2. ಅನೇಕ ಕಡತಗಳಲ್ಲಿ ಉದಾ: 1)2010-11ನೇ ಸಾಲಿನ ಆಯವ್ಯಯದಲ್ಲಿ ಪಾಲಿಕೆಯ ಪ್ರಾಥಮಿಕ ಶಾಲೆಯ 1ನೇ ಮತ್ತು 4ನೇ ತರಗತಿ ವಿದ್ಯಾರ್ಥಿಗಳಿಗೆ ಲೇಖನ ಮತ್ತು ಕಲಿಕಾ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ, 2)2010-11ನೇ ಸಾಲಿನಲ್ಲಿ ಪಾಲಿಕೆಯ ಕಿರಿಯ ಕಾಲೇಜುಗಳಿಗೆ ವಿದ್ಯುನ್ಮಾನ ಪ್ರಯೋಗಾಲಯಕ್ಕೆ ಸಾಮಗ್ರಿಗಳನ್ನು ಒದಗಿಸುವ ಬಗ್ಗೆ ಹಾಗೂ ಕೆಳಕಂಡ ಕಡತಗಳಲ್ಲಿ ಅತಿ ಗಂಭೀರ ಸ್ವರೂಪದ ಲೋಪದೋಷಗಳನ್ನು ಸಮಿತಿಯು ಗಮನಿಸಿದ್ದು, ಅವುಗಳು ಕೆಳಕಂಡಂತಿರುತ್ತವೆ.

| ಕ್ರ.ಸಂ | ಕಡತದ ಸಂಖ್ಯೆ | ವೆಚ್ಚದ ಮೊತ್ತ |
|---|---|---|
| 1 | ವಿದ್ಯಾ/ಸಶಿಅ/ಪಿಆರ್/07/2010-11, | 99,958-00 |
| 2 | ವಿದ್ಯಾ/ಪಿಆರ್/95/2010-11, | 99,940-00 |
| 3 | ವಿದ್ಯಾ/ಪಿಆರ್/ಸಶಿಅ/ಪಿ.ಆರ್/06/2010-11 | 99,960-00 |
| 4 | ವಿದ್ಯಾ/ಸಿಶಿಅ/ಪಿಆರ್/15/2010-11 | 99,993-00 |
| 5 | ವಿದ್ಯಾ/ಸಿಶಿಅ/ಪಿಆರ್/11/2010-11 | 99,695-00 |
| 6 | ವಿದ್ಯಾ/ಸಿಶಿಅ/ಪಿಆರ್/16/2010-11 | 99,755-00 |
| 7 | ವಿದ್ಯಾ/ಸಿಶಿಅ/ಪಿಆರ್/10/2010-11 | 99,960-00 |
| 8 | ವಿದ್ಯಾ/ಸಿಶಿಅ/ಪಿಆರ್/17/2010-11 | 99,930-00 |
| 9 | ವಿದ್ಯಾ/ಸಿಶಿಅ/ಪಿಆರ್/08/2010-11 | 99,960-00 |
| 10 | ವಿದ್ಯಾ/ಸಿಶಿಅ/ಪಿಆರ್/96/2010-11 | 99,960-00 |
| 11 | ವಿದ್ಯಾ/ಸಿಶಿಅ/ಪಿಆರ್/09/2010-11 | 99,993-00 |
| 12 | ವಿದ್ಯಾ/ಸಿಶಿಅ/ಪಿಆರ್/12/2010-11 | 99,965-00 |
| 13 | ವಿದ್ಯಾ/ಸಿಶಿಅ/ಪಿಆರ್/15/2010-11 | 99,993-00 |
| 14 | ವಿದ್ಯಾ/ಸಿಶಿಅ/ಪಿಆರ್/14/2010-11 | 99,993-00 |
| 15 | ವಿದ್ಯಾ/ಸಿಶಿಅ/ಪಿಆರ್/07/2010-11 | 99,952-00 |
| 16 | ವಿದ್ಯಾ/ಸಿಶಿಅ/ಪಿಆರ್/11/2010-11 | 99,993-00 |
| 17 | ವಿದ್ಯಾ/ಸಿಶಿಅ/ಪಿಆರ್/16/2010-11 | 99,952-00 |

2010-11ನೇ ಸಾಲಿನ 1ನೇ ಮತ್ತು 2ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ ಹಾಗೂ ಇತರೆ ಕಡತಗಳಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳೆಂದರೆ ಎಲ್ಲಾ ಕಡತಗಳಲ್ಲಿ ಯಾವುದೇ ವಿಷಯ ನಿರ್ವಾಹಕರು ಹಾಗೂ ವ್ಯವಸ್ಥಾಪಕರುಗಳು ಮೇಲುರುಜು ಮಾಡಿರುವುದಿಲ್ಲ. ಎಲ್ಲಾ ಕಡತಗಳಲ್ಲಿಯೂ ಸಹ ತಪಾಸಣೆ ವೇಳೆ ವಿಷಯ ನಿರ್ವಾಹಕರುಗಳು ನೀಡಿದ ಮಾಹಿತಿಯಂತೆ ಈ ಎಲ್ಲಾ ಕಡತಗಳನ್ನು ಶ್ರೀ. ನಾರಾಯಣ್ ಎಂಬ ಅಪರಿಚಿತ ವ್ಯಕ್ತಿಯು ಕಡತವನ್ನು ಪ್ರಾರಂಭಿಸುವ ಪ್ರಕ್ರಿಯೆಯಿಂದ ಹಿಡಿದು ಬಿಲ್ ತಯಾರಿಸುವವರೆವಿಗೂ ಕಡತವನ್ನು ಒಮ್ಮೆಲೆ ತಯಾರಿಸಿ ಒಂದೇ ಬಾರಿಗೆ ನಕಲಿ ಕೊಟೇಷನ್‌ಗಳನ್ನು ಸಿದ್ದಪಡಿಸಿ, ಟಿಪ್ಪಣಿಹಾಳಗಳನ್ನು ತಯಾರಿಸಿ, ಡಿ.ಸಿ.ಬಿಲ್ಲುಗಳನ್ನು ತಯಾರಿಸಿ ನೇರವಾಗಿ ವಿದ್ಯಾಧಿಕಾರಿಗಳ ಸಹಿ ಪಡೆದು, ಬಿಲ್ ಪಡೆಯುತ್ತಿರುವುದು ಕಡತಗಳ ಪರಿಶೀಲನೆಯಿಂದ ಹಾಗೂ ತಪಾಸಣೆ ಸಂದರ್ಭದಲ್ಲಿ ವಿಷಯ ನಿರ್ವಾಹಕರು ನೀಡಿದ ಮಾಹಿತಿಯಿಂದ ತಿಳಿದು ಬಂದಿರುತ್ತದೆ.

ಎಲ್ಲಾ ಕಡತಗಳಲ್ಲಿಯೂ ಸಹ ವಿದ್ಯಾಧಿಕಾರಿಗಳು ಸಹಿ ಮಾಡಿ ದಿನಾಂಕವನ್ನು ನಮೂದಿಸಿರುವುದಿಲ್ಲ, ಸರಬರಾಜು ದಿನಾಂಕ, ಕೊಟೇಷನ್ ಕರೆಯೋಲೆ ದಿನಾಂಕ, ಲಕೋಟೆ ತೆರೆದ ದಿನಾಂಕಗಳನ್ನು ಹಾಕದೆ ಒಮ್ಮೆಲೆ ನಕಲಿ ಬಿಲ್‌ಗಳನ್ನು ಸೃಷ್ಟಿಸಿ ಬಿಲ್ ಪಾವತಿಸಿರುವ ಬಗ್ಗೆ ಹಲವಾರು ಅನುಮಾನಗಳು ಬರುತ್ತಿದ್ದು ಈ ಬಗ್ಗೆ ತನಿಖೆಯಿಂದ ಮಾತ್ರ ಸತ್ಯಾಂಶ ಹೊರ ಬರುತ್ತದೆ ಎಂದು ಸಮಿತಿಯು ಅಭಿಪ್ರಾಯಿಸುತ್ತದೆ ಹಾಗೂ ಈ ರೀತಿ ಖರೀದಿಸಿದ ಸಾಮಗ್ರಿಗಳನ್ನು ಯಾವುದೇ ದಾಸ್ತಾನಿಗೆ ತೆಗೆದು ಕೊಂಡಿರುವ ಬಗ್ಗೆಯಾಗಲಿ ಹಾಗೂ ವಿತರಿಸಿರುವ ಬಗ್ಗೆ ಸ್ವೀಕೃತಿಗಳು ಲಭ್ಯವಿರುವುದಿಲ್ಲ. ಕೆಲವು ಕಡತಗಳಲ್ಲಿ ಸ್ವೀಕೃತಿ ಪತ್ರಗಳು ಇದ್ದು ಸ್ವೀಕೃತಿಯಾಗಿರುವ ಬಗ್ಗೆ ಯಾರಿಂದಲೂ ಸಹಿ ಪಡೆದಿರುವುದಿಲ್ಲ ಹಾಗೂ ಯಾವ ಯಾವ ಶಾಲೆ ಕಾಲೇಜುಗಳಿಗೆ ಎಷ್ಟು ಪ್ರಮಾಣದಲ್ಲಿ ಸಾಮಗ್ರಿಗಳನ್ನು ವಿತರಿಸಲಾಗಿದೆ ಎಂಬ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

2010–11ನೇ ಸಾಲಿಗೆ ಪಾಲಿಕೆಯ ಜೋಗು ಪಾಳ್ಯ ಪ್ರೌಡಶಾಲೆಗೆ ಪೀಠೋಪಕರಣ ಖರೀದಿಸುವ ಕಡತಗಳನ್ನು ಪರಿಶೀಲಿಸಲಾಗಿ, ಒಂದೇ ಶಾಲೆಗೆ ಪೀಠೋಪಕರಣ ಖರೀದಿಸಲು ಎರಡು ಕಡತಗಳನ್ನು ಏಕೆ ನಿರ್ವಹಿಸಲಾಗಿದೆ? ಹಾಗೂ 2 ಕಡತಗಳಲ್ಲಿ ಒಬ್ಬರೇ ಸರಬರಾಜುದರಿಂದ ಖರೀದಿಸಲಾಗಿದ್ದು, ಒಬ್ಬರೇ ಸರಬರಾಜುದಾರರು ಒಂದೇ ಶಾಲೆಗೆ ಖರೀದಿಸಲಾಗಿದ್ದರೂ ಎರಡು ಕಡತಗಳಲ್ಲಿ ನಿರ್ವಹಿಸಿ ಬಿಲ್ ಪಾವತಿಸಿರುವ ಬಗ್ಗೆ ವಿವರಣೆ ನೀಡುವಲ್ಲಿ ಹಾಜರಿದ್ದ ಅಧಿಕಾರಿಗಳು ವಿಫಲರಾಗಿದ್ದು ಹಾಗೂ ಕೆ.ಟಿ.ಪಿ.ಪಿ ನಿಯಮಗಳಿಂದ ಹೊರಗಿಡುವ ಒಂದೇ ದುರುದ್ದೇಶದಿಂದ ಒಂದೇ ಕೆಲಸಕ್ಕೆ ಎರಡು ಕಡತಗಳನ್ನು ನಿರ್ವಹಿಸಿ ಸರಬರಾಜುದಾರರಿಗೆ ಅನುಕೂಲ ಮಾಡಿಕೊಟ್ಟಿರುವುದು ಕಂಡು ಬಂದಿದ್ದು ಈ ಒಂದು ಪ್ರಕರಣವೇ ಈ ಇಲಾಖೆಯಲ್ಲಿ ನಡೆದಿರುವ ಇತರೆ ಅವ್ಯವಹಾರಗಳಿಗೆ ಸಾಕ್ಷಿಯಂತಿದೆ ಎಂದು ಸಮಿತಿಯು ಅಭಿಪ್ರಾಯಿಸುತ್ತದೆ.

**VI:** ***ಅನುಕಂಪದ ಆಧಾರದ ನೇಮಕಾತಿ ಹಾಗೂ ಸಿಬ್ಬಂದಿಗಳ ಬಟವಾಡೆ ಸಂಬಂಧಿಸಿದ ಕಡತಗಳಲ್ಲಿ ಕಂಡು ನ್ಯೂನತೆಗಳು:–***

- ದಿವಂಗತ ಸಿ.ಎನ್. ಮಾಯಣ್ಣ ಉಪನ್ಯಾಸಕರುರವರ ನಿವೃತ್ತಿ ವೇತನದ ಕಡತವನ್ನು ದಿನಾಂಕ:08.03.2012ರಂದು ವಿದ್ಯಾಧಿಕಾರಿಗಳ ಕಛೇರಿಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಮುಂದಿನ ಕ್ರಮಕ್ಕಾಗಿ ಕಳುಹಿಸಿದ್ದು, ವಿದ್ಯಾಧಿಕಾರಿಗಳ ಕಛೇರಿಯ ವಿಷಯ ನಿರ್ವಾಹಕರಾದ ಶ್ರೀ ಅನ್ಬಳಗನ್‌ರವರ ಅಲ್ಮೆರಾದಲ್ಲಿ ಸದರಿ ಕಡತವನ್ನು ಯಾವುದೇ ಕ್ರಮ ಕೈಗೊಳ್ಳದೇ ದುರುದ್ದೇಶ ಪೂರ್ವಕವಾಗಿ ಇಟ್ಟಿರಲಾಗಿರುತ್ತದೆ.
- ದಿವಂಗತ ನಂಜಮ್ಮ, ಆಯಾರವರು ಬಿ.ಬಿ.ಎಂ.ಪಿ ಶಿಶುವಿಹಾರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ದಿನಾಂಕ:14.02.2009ರಲ್ಲಿ ಮರಣ ಹೊಂದಿದ್ದು ಇವರ ಮಗ ಶ್ರೀ ಎಂ. ಜಿ. ಕುಮಾರ್ ರವರು ದಿನಾಂಕ:08.01.2010ರಂದು ಮನವಿ ನೀಡಿ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲು ಕೋರಿದ್ದು, ದಿನಾಂಕ:24.06.2010ರಂದು ಈ ಕಡತವನ್ನು ಜಂಟಿ ಆಯುಕ್ತರು (ದಕ್ಷಿಣ)ರವರಿಗೆ ಶಿಫಾರಸ್ಸಿನೊಂದಿಗೆ ವಿದ್ಯಾಧಿಕಾರಿಗಳು ಕಳುಹಿಸಿದ್ದು ಈ ಸಂಬಂಧ ನೇಮಕಾತಿ ಸಭೆಯನ್ನು ದಿನಾಂಕ:16.07.2010ರಂದು ನಿಗಧಿಪಡಿಸಿದ್ದು ಆದರೆ ವಿದ್ಯಾಧಿಕಾರಿಗಳು ಮೇಲ್ಕಂಡ ಸಭೆಗೆ ಹಾಜರಾಗದೇ ಇದ್ದ ಕಾರಣ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸದರಿ ಕಡತವನ್ನು ಜಂಟಿ ಆಯುಕ್ತರು (ದಕ್ಷಿಣ)ರವರು ದಿನಾಂಕ:27.07.2010ರಂದು ವಿದ್ಯಾಧಿಕಾರಿಗಳ ಕಛೇರಿಗೆ ಹಿಂದಿರುಗಿಸಿದ್ದು ಈ ಕಡತದ ಬಗ್ಗೆ ಸುಮಾರು ಎರಡುವರೆ ವರ್ಷಗಳಿಂದ ಯಾವುದೇ ಕ್ರಮ ಜರುಗಿಸದೇ ವಿಷಯ ನಿರ್ವಾಹಕರಾದ ಶ್ರೀ. ಅನ್ಬಳಗನ್ ರವರು ಅಲ್ಮೆರದಲ್ಲಿ ಇರಿಸಿರುತ್ತಾರೆ.

- ದಿವಂಗತ ಕೆ. ವೆಂಕಟಪ್ಪ, ದೈಹಿಕ ಶಿಕ್ಷಕರುರವರು ದಿನಾಂಕ:26.08.2005ರಂದು ಮರಣಹೊಂದಿದ್ದು, ಇವರ ಮಗ ಶ್ರೀ. ವಿ. ವಿನೋದ್‌ಕುಮಾರ್‌ರವರು ದಿ:07.01.2006ರಂದು ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಕೋರಿದ್ದು, ಸುಮಾರು 5 ವರ್ಷಗಳ ನಂತರ ದಿ:28.02.2011ರಂದು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ವಿದ್ಯಾಧಿಕಾರಿಗಳ ಕಛೇರಿಗೆ ಕಡತವನ್ನು ಕಳುಹಿಸಿದ್ದು ವಿದ್ಯಾಧಿಕಾರಿಗಳ ಕಛೇರಿಯಲ್ಲಿ ಕಡತವನ್ನು ವ್ಯವಹರಿಸಲು ಸುಮಾರು 30 ದಿನಗಳಷ್ಟು ಅವಧಿಯನ್ನು ತೆಗೆದುಕೊಂಡು ಕೆಲವು ಅವಲೋಕನೆಗೆ ಸಂಬಂಧಿಸಿದಂತೆ ಉಪ ಆಯುಕ್ತರು(ದಕ್ಷಿಣ)ರವರು ದಿ:24.05.2011ರಂದು ಬಟವಾಡೆ ಅಧಿಕಾರಿಗಳಿಗೆ ಕಡತವನ್ನು ಹಿಂದಿರುಗಿಸಿದ್ದು, ಈ ಬಗ್ಗೆ ವಿವರಿಸಲು ವಿದ್ಯಾಧಿಕಾರಿಗಳು ಸುಮಾರು 9 ತಿಂಗಳಷ್ಟು ಸಮಯವನ್ನು ತೆಗೆದುಕೊಂಡು, ಪುನಃ ಈ ಪ್ರಕರಣದಲ್ಲಿ ನೇಮಕಾತಿ ಕುರಿತಂತೆ ದಿ:14.03.2012ರಂದು ನೇಮಕಾತಿ ಸಮಿತಿಯ ಸಭೆಯ ಸಮಯವನ್ನು ನಿಗಧಿಪಡಿಸಲು ಜಂಟಿ ಆಯುಕ್ತರು(ದಕ್ಷಿಣ)ರವರು ಆದೇಶಿಸಿದ್ದು ಹಾಗೂ ಕಡತದ ಸಂಬಂಧ ಕೆಲವು ಮಾಹಿತಿಗಳನ್ನು ಕೋರಿದ್ದು, ಈ ಸಂಬಂಧ ದಿನಾಂಕ:25.07.2012ರಂದು ವಿದ್ಯಾಧಿಕಾರಿಗಳ ಕಛೇರಿಯಲ್ಲಿ ಕಡತವನ್ನು ಸ್ವೀಕರಿಸಿ ಯಾವುದೇ ವಿಧವಾದ ಕ್ರಮ ಜರುಗಿಸದೇ ದುರುದ್ದೇಶಪೂರ್ವಕವಾಗಿ ಕಡತವನ್ನು ವಿಲೇ ಇಡಲಾಗಿರುತ್ತದೆ. ಇಂತಹ ಪ್ರಕರಣಗಳಿಂದ ಪಾಲಿಕೆಯ ಮೃತ ನೌಕರರುಗಳ ಅವಲಂಭಿತರಿಗೆ ನೌಕರಿ ನೀಡುವಲ್ಲಿ ವಿನಾ ಕಾರಣ ವಿಳಂಭವಾಗುತ್ತಿದ್ದು, ಈ ಸಂಬಂಧ ಕಡತಗಳ ವಿಲೇವಾರಿಯ ವಿಳಂಭಕ್ಕೆ ಹಾಗೂ ಲೋಪದೋಷಗಳಿಗೆ ಕಾರಣ ಕರ್ತರಾದ ಸಿಬ್ಬಂದಿ ಹಾಗೂ ಅಧಿಕಾರಿ ವರ್ಗದವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಆಯುಕ್ತರನ್ನು ಸಮಿತಿಯು ಕೋರಿದೆ.

**VII: ಇತರೆ ಕಡತಗಳು:**

1. 2008-09ನೇ ಸಾಲಿನ ಆಯವ್ಯಯದಲ್ಲಿ ಪಾಲಿಕೆಯ ಶಾಲಾ ಕಾಲೇಜುಗಳಿಗೆ ರಿವರ್ಸಬಲ್ ಡೆಸ್ಕ್‌ಗಳನ್ನು ಒದಗಿಸುವ ಬಗ್ಗೆ, ಮೊತ್ತ ರೂ:49,96,530-00, ಕಡತದ ಸಂಖ್ಯೆ:ವಿದ್ಯಾ/ಸಶಿಅ/ಪಿಆರ್/07/2008-09,
2. 2010-11ನೇ ಸಾಲಿನ ಪಾಲಿಕೆಯ ಶಾಲಾ/ಕಾಲೇಜುಗಳಿಗೆ Cast Iron Reversible Desk ಗಳನ್ನು ಒದಗಿಸುವ ಬಗ್ಗೆ, ಮೊತ್ತ ರೂ:46,08,480-00, ಕಡತದ ಸಂಖ್ಯೆ: ವಿದ್ಯಾ/ಸಶಿಅ/ಪಿಆರ್/21/2010-11,
3. 2007-08ನೇ ಸಾಲಿನ ಆಯವ್ಯಯದಲ್ಲಿ ಪಾಲಿಕೆಯ ಶಾಲಾ ಕಾಲೇಜುಗಳಿಗೆ ಪೀಠೋಪಕರಣಗಳನ್ನು ಒದಗಿಸುವ ಬಗ್ಗೆ. ಮೊತ್ತ ರೂ:49,99,831-00, ಕಡತದ ಸಂಖ್ಯೆ:ವಿದ್ಯಾ/ಸಶಿಅ/ಪಿಆರ್/07/2007-08,

4. 2006–07ನೇ ಸಾಲಿನ ಶಿಕ್ಷಣ ಇಲಾಖೆಯ ಶಾಲಾ ಕಾಲೇಜುಗಳಿಗೆ ಪೀಠೋಪಕರಣ ಒದಗಿಸುವ ಬಗ್ಗೆ, ಮೊತ್ತ ರೂ:29,99,340–00, ಕಡತದ ಸಂಖ್ಯೆ:ವಿದ್ಯಾ/ಸಶಿಅ/ಪಿಆರ್/04/2006–07,
5. 2010–11ನೇ ಸಾಲಿಗೆ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಿರುವ ಕಾರ್ಯದ ಬಗ್ಗೆ. [ಮೊತ್ತ ರೂ. 23,16,400–00] (ಕಡತದ ಸಂಖ್ಯೆ: ಎಸ್.ಪಿ.ಪಿ.ಆರ್/28/2010–11);- ಮೆ॥ ಟಾಯ್ಸ್ ಅಂಡ್ ಸ್ಪೋರ್ಟ್ಸ್ ರವರಿಗೆ, ಸಂಖ್ಯೆ: ಎಸ್.ಪಿ.ಪಿ.ಆರ್/28/2010–11, ಎಸ್.ಪಿ.ಪಿ.ಆರ್/28/2010–11, ಮೆ॥ ವಿನ್ಯಾಸ್ ಪ್ಲೇ ಯುನಿಟ್ ರವರಿಗೆ.

**ಮೇಲ್ಕಂಡ ಕಡತಗಳಲ್ಲಿಯೂ ಸಹ ಸಾಮಾನ್ಯ ಆಡಳಿತಾತ್ಮಕ ಲೋಪದೋಷಗಳು ಇದ್ದು, ಅವುಗಳು ಈ ಕೆಳಕಂಡಂತಿರುತ್ತದೆ.**

- ಟೆಂಡರ್ ಸಮಿತಿಯಲ್ಲಿ ಲೆಕ್ಕ ಶಾಖೆಯ ಹಾಗೂ ಕಾನೂನು ಇಲಾಖೆಯ ಯಾವೊಬ್ಬ ಅಧಿಕಾರಿಗಳು ಸದಸ್ಯರಾಗಿರುವುದಿಲ್ಲ.
- ಯಾವುದೇ ಕಛೇರಿಗಳಲ್ಲಿ ಕಡತ ವ್ಯವಹರಣೆಯಾಗಿರುವ ಬಗ್ಗೆ ದಿನಾಂಕವಾಗಲಿ, ಅಧಿಕೃತ ಮೊಹರುಗಳಾಗಲಿ ಹಾಕಿರುವುದಿಲ್ಲ.
- ಬಹಳಷ್ಟು ಕಡತಗಳಂತೆ ಒಬ್ಬರೇ ಬಿಡ್‌ದಾರರುಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದರೂ ಸಹ ಮರು ಟೆಂಡರ್ ಕರೆಯದೇ ಸಿಂಗಲ್ ಬಿಡ್‌ದಾರರುಗಳಿಗೆ ಟೆಂಡರ್ ನೀಡಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ.
- ಮೇಲ್ಕಂಡ ಎಲ್ಲಾ ಕಡತಗಳಲ್ಲಿ ಕೋಟ್ಯಾಂತರ ರೂಗಳ ಮೊತ್ತದ ಪೀಠೋಪಕರಣಗಳು, ಸಾದಿಲ್ವಾರುಗಳನ್ನು ಖರೀದಿಸಿದ್ದು, ಅವುಗಳನ್ನು ದಾಸ್ತಾನು ತೆಗೆದುಕೊಂಡಿರುವ ಬಗ್ಗೆ ಸಮಿತಿಯ ತಪಾಸಣೆ ವೇಳೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ.
- ಆದ್ದರಿಂದ ಮೇಲ್ಕಂಡ ಎಲ್ಲಾ ಕಡತಗಳಲ್ಲಿ ಹಾಗೂ 2006–07ನೇ ಸಾಲಿನಿಂದ ಖರೀದಿಸಿರುವ ಎಲ್ಲಾ ಸಾಮಗ್ರಿಗಳ ಬಗ್ಗೆ ಹಾಗೂ ಇತರೆ ಕಡತಗಳ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡಲು ತನಿಖೆಗಾಗಿ ಬಿ.ಎಂ.ಟಿ.ಎಫ್ ರವರಿಗೆ ಕೂಡಲೇ ವಹಿಸುವಂತೆ ಆಯಕ್ತರಿಗೆ ಸೂಚಿಸಿದೆ.

ಮೇಲ್ಕಂಡ ಕೆಲವೇ ಪ್ರಕರಣಗಳಲ್ಲಿ ಇಷ್ಟೊಂದು ಆಡಳಿತಾತ್ಮಕ ಲೋಪದೋಷಗಳು ಉಂಟಾಗಿದ್ದರೂ ಸಹ 2006–07ನೇ ಸಾಲಿನಿಂದ ಯಾವುದೇ ಕ್ರಮ ಕೈಗೊಳ್ಳದೆ ಸಮರ್ಪಕ ದಾಖಲಾತಿಗಳನ್ನು ನಿರ್ವಹಿಸದೇ ಕೋಟ್ಯಾಂತರ ರೂಗಳ ಬಿಲ್‌ಗಳನ್ನು ಪಾವತಿ ಮಾಡಿದ್ದು, ಕೆಲವು ನಕಲಿ ಬಿಲ್‌ಗಳನ್ನು ಸಹ ಪಾವತಿಸಿರುವುದು ಸಮಿತಿಯ ತಪಾಸಣೆ ವೇಳೆ ಕಂಡುಬಂದಿರುವುದರಿಂದ ವಿದ್ಯಾ ಇಲಾಖೆಯಲ್ಲಿ ಇದುವರೆವಿಗೂ ನಿರ್ವಹಿಸಿರುವ ಎಲ್ಲಾ ಕಡತಗಳನ್ನು (ಪೀಠೋಪಕರಣ ಖರೀದಿ, ಗಣಕಯಂತ್ರ ಖರೀದಿ, ಸಮವಸ್ತ್ರ ಖರೀದಿ, ಲೇಖನ ಸಾಮಗ್ರಿಗಳು, ಪಠ್ಯಪುಸ್ತಕ ಖರೀದಿ, ಷೂಗಳ ಖರೀದಿ, ಮಕ್ಕಳ ರ್‍ಯಾಲಿ ಕಾರ್ಯಕ್ರಮಗಳು, ಕೆಂಪೇಗೌಡ ದಿನಾಚರಣೆ, ರಾಷ್ಟ್ರೀಯ ಹಬ್ಬಗಳ ದಿನಾಚರಣೆಗೆ ಸಂಬಂಧಿಸಿದ ಕಡತಗಳು) ಪರಿಶೀಲಿಸುವುದು ಅಗತ್ಯವಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಇಲಾಖೆಯಲ್ಲಿ ಎಲ್ಲಾ ಸಿಬ್ಬಂದಿಗಳು ಮತ್ತು ಅಧಿಕಾರಿ ವರ್ಗದವರು ತಮಗೆ ವಹಿಸಿರುವ ಆಡಳಿತಾತ್ಮಕ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಪೂರ್ಣಪ್ರಮಾಣದಲ್ಲಿ ವಿಫಲರಾಗಿ, ಉದ್ದೇಶ ಪೂರ್ವಕವಾಗಿ ಕರ್ತವ್ಯಲೋಪವೆಸಗಿದ್ದು ಇದರಿಂದಾಗಿ ಪಾಲಿಕೆಯ ಕೀರ್ತಿಗೆ ಕಳಂಕ ಉಂಟಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಕೆಳಕಂಡ ಅಗತ್ಯಕ್ರಮವನ್ನು ಕೂಡಲೇ ಆಯುಕ್ತರು ಕೈಗೊಳ್ಳಬೇಕೆಂದು ಸಮಿತಿಯು ತಿಳಿಯಪಡಿಸುತ್ತದೆ.

1. 2006–07ನೇ ಸಾಲಿನಿಂದ ಈ ಇಲಾಖೆಯಲ್ಲಿ ನಡೆದಂತಹ ಎಲ್ಲಾ ಉಪಕರಣಗಳ ಖರೀದಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಶಿಕ್ಷಕರು ಹಾಗೂ ಗಣಕ ಯಂತ್ರ ತರಭೇತುದಾರರ ಟೆಂಡರ್ ಪ್ರಕ್ರಿಯೆಲ್ಲಿ ಉಂಟಾಗಿರುವ ಆಡಳಿತ ಲೋಪದೋಷಗಳ ಕುರಿತಂತೆ ಬಿ.ಎಂ.ಟಿ.ಎಫ್ ರವರಿಂದ ಸಮಗ್ರವಾಗಿ ತನಿಖೆ ನಡೆಸತಕ್ಕದ್ದು.

2. 2006–07ನೇ ಸಾಲಿನಿಂದ ಈ ಇಲಾಖೆಯಲ್ಲಿನ ಕಡತಗಳ ವ್ಯವಹರಣೆ ಕುರಿತಂತೆ ಮರು ಲೆಕ್ಕ ಪರಿಶೋಧನೆಯನ್ನು ಅಕೌಂಟೆಂಟ್ ಜನರಲ್‌ರವರಿಂದ(ಎ.ಜಿ ರವರಿಂದ) ನಡೆಸತಕ್ಕದ್ದು.

3. ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳು ಯಾವುದೇ ವಿಧವಾದ ಖರೀದಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಕಾರ್ಯಗಳನ್ನು ನಿರ್ವಹಿಸದಂತೆ ಕಟ್ಟು ನಿಟ್ಟಾಗಿ ಕ್ರಮ ಕೈಗೊಳ್ಳುವುದು.

4. ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಿಷಯ ನಿರ್ವಹಕರುಗಳನ್ನು ಹಾಗೂ ವ್ಯವಸ್ಥಾಪಕರನ್ನು ಹೆಚ್ಚಿನ ಜವಾಬ್ದಾರಿಯಿಲ್ಲದ ಕಛೇರಿಗಳಿಗೆ ವರ್ಗಾಹಿಸತಕ್ಕದ್ದು,

5. ಈ ಪ್ರಕ್ರಿಯೆಯಲ್ಲಿ ಆಡಳಿತಾತ್ಮಕವಾಗಿ ಕರ್ತವ್ಯ ಲೋಪವೆಸಗಿರುವ ನಿವೃತ್ತ ಅಧಿಕಾರಿಗಳು ಹಾಗೂ ಭಾಗಿಯಾಗಿರುವ ವಿದ್ಯಾ ಇಲಾಖೆಯ ಹಿರಿಯ ಹಾಗೂ ಕಿರಿಯ ಅಧಿಕಾರಿಗಳ ಮೇಲೆ ನಿರ್ಧಾಕ್ಷಿಣ್ಯ ಕ್ರಮ ಜರುಗಿಸತಕ್ಕದ್ದು.

6. ಬಡ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ವಿದ್ಯಾ ಇಲಾಖೆಯಿಂದ ಉಪ ನಿರ್ದೇಶಕ ವೃಂದದ ದಕ್ಷರಾದ ಅಧಿಕಾರಿಯೊಬ್ಬರನ್ನು ಈ ಹಿಂದೆ ಪಾಲಿಕೆಯಲ್ಲಿ ಅನುಷ್ಠಾನದಲ್ಲಿದಂತೆ ವಿದ್ಯಾಧಿಕಾರಿಗಳನ್ನಾಗಿ ನೇಮಿಸಲು ಕ್ರಮ ಕೈಗೊಳ್ಳತಕ್ಕದ್ದು.

7. ವಿದ್ಯಾಧಿಕಾರಿಗಳ ಕಛೇರಿಯನ್ನು ಕೂಡಲೇ ಪಾಲಿಕೆಯ ಕೇಂದ್ರ ಕಛೇರಿಯ ಆವರಣದಲ್ಲಿ ಕಾರ್ಯನಿರ್ವಹಿಸಲು ಸ್ಥಳಾಂತರಿಸುವುದು.

8. ಪಾಲಿಕೆಯ ಅನುಧಾನಿತ ಶಾಲೆಗಳಿಗೆ ಸರ್ಕಾರದಿಂದ ಮಂಜೂರಾಗುವ ಅನುದಾನವನ್ನು ಕಳೆದ 20 ವರ್ಷಗಳಿಂದ ಪಡೆಯಲು ವಿಫಲರಾಗಿರುವ ವಿದ್ಯಾಧಿಕಾರಿಗಳ ಮೇಲೆ ನಿರ್ಧಾಕ್ಷಿಣ್ಯ ಕ್ರಮ ಜರುಗಿಸುವುದು ಹಾಗೂ ಸರ್ಕಾರದಿಂದ ಪಾಲಿಕೆಯ ಅನುದಾನಿತ ಶಾಲೆಗಳಿಗೆ ಬರಬೇಕಾದ ಅನುದಾನವನ್ನು ಪಡೆಯಲು ಕ್ರಮ ಕೈಗೊಳ್ಳತಕ್ಕದ್ದು.

9. ಇನ್ನು ಮುಂದೆ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳುವ ಮುನ್ನ ವಿದ್ಯಾರ್ಥಿ ಹಾಗೂ ಶಿಕ್ಷಕರ ಅನುಪಾತವನ್ನು ಅನುಸರಿಸಿ ಕ್ರಮ ಕೈಗೊಳ್ಳುವುದು.

ತಪಾಸಣೆ ಸಂದರ್ಭದಲ್ಲಿ ಪರಿಶೀಲನೆಗಾಗಿ ವಶಪಡಿಸಿಕೊಂಡಿದ್ದ ಕಡತಗಳ ಪಟ್ಟಿಯನ್ನು ಲಗತ್ತಿಸಿ ಕಳುಹಿಸಿದೆ.

ಇದು ಪಾಲಿಕೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಎಂದು ಪರಿಗಣಿಸತಕ್ಕದ್ದು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಮಾನ್ಯ ಅಧ್ಯಕ್ಷರು, ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿರವರ ಅವಗಾಹನೆಗೆ ತರಲು ಅಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4. ಎಲ್ಲಾ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರುಗಳ/ಆಡಳಿತ ಪಕ್ಷದ/ ವಿರೋಧ ಪಕ್ಷಗಳ ನಾಯಕರುಗಳ ಅವಗಾಹನೆಗೆ ತರಲು ಅಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
6. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.
8. ಜಂಟಿ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.
9. ವಿದ್ಯಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.
10. ಕಛೇರಿ ಪ್ರತಿ